# ಜನತಾವಾಣಿ

ಸಂಪಾದಕರು : ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಜನವರಿ 30, 2022

ಸಂಪುಟ : 48 ಸಂಚಿಕೆ : 260 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 6 ರೂ : 4.00 www.janathavani.com janathavani@mac.com


# ಬೊಮ್ಮಾಯಿ ಬಂದರೂ ಭ್ರಷ್ಟಾಚಾರ ನಿಂತಿಲ್ಲ

## ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಬಿಜೆಪಿ ಹಗರಣಗಳ ತನಿಖೆ: ಸಿದ್ಧರಾಮಯ್ಯ



ಬೆಂಗಳೂರು, ಜ. 29 - ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಬಿಜೆಪಿ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರದ ಹಗರಣಗಳ ಬಗ್ಗೆ ತನಿಖೆ ನಡೆಸುವುದಾಗಿ ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿ ಆಗಿ ನಿನ್ನೆಗೆ ಆರು ತಿಂಗಳಾಗಿದೆ. ರಾಜ್ಯದಲ್ಲಿ ಬಿಜೆಪಿ ಸರ್ಕಾರ ಬಂದು ಎರಡೂವರೆ ವರ್ಷಗಳಾಗಿದೆ. ಬೊಮ್ಮಾಯಿ ಅವರದು ಹಿಂದಿನ ಯಡಿಯೂರಪ್ಪ ಅವರ ಸರ್ಕಾರದ ಮುಂದುವರೆದ ಭಾಗವೇ ಹೊರತು ಹೊಸ ಸರ್ಕಾರವೇನಲ್ಲ ಎಂದರು.

ಈ ಸರ್ಕಾರದ ಸಾಧನೆ ಎಂದರೆ ಭ್ರಷ್ಟಾಚಾರ ಮಾತ್ರ. ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣನವರು ಪ್ರಧಾನಿಗಳಿಗೆ ಪತ್ರ ಬರೆದು ರಾಜ್ಯ ಬಿಜೆಪಿ ಸರ್ಕಾರ 40% ಕಮೀಷನ್ ತೆಗೆದುಕೊಳ್ಳುತ್ತಿದೆ ಎಂದು ದೂರು ನೀಡಿದ್ದಾರೆ. ತಮ್ಮನ್ನು ತಾವು ಚೌಕಿದಾರ್ ಎಂದು ಕರೆದುಕೊಳ್ಳುವ ಪ್ರಧಾನಿ ಮೋದಿಯವರು ಇದನ್ನು ನೋಡಿಯೂ ಸುಮ್ಮನಿದ್ದಾರೆ ಎಂದು ತರಾಟೆಗೆ ತೆಗೆದುಕೊಂಡರು. ಒಟ್ಟಾರೆ ಈ ಸರ್ಕಾರದ ಸಾಧನೆ ಭ್ರಷ್ಟಾಚಾರ ಮತ್ತು ವೈಫಲ್ಯಗಳು ಮಾತ್ರ. ಮುಖ್ಯಮಂತ್ರಿ ಬದಲಾಗಿದ್ದಾರೆಯೇ ಹೊರತು ಸರ್ಕಾರ ಬದಲಾಗಿಲ್ಲ, ಭ್ರಷ್ಟಾಚಾರ ನಿಂತಿಲ್ಲ ಎಂದು ದೂರಿದರು.

2018 ರಲ್ಲಿ ಬಿಜೆಪಿಯವರು ಜನರಿಗೆ ನೀಡಿದ್ದ ಚುನಾವಣಾ ಪ್ರಣಾಳಿಕೆ ಯಡಿಯೂರಪ್ಪ ಸರ್ಕಾರದಷ್ಟೇ ಬೊಮ್ಮಾಯಿ ಅವರ ಸರ್ಕಾರಕ್ಕೂ ಅನ್ವಯವಾಗುತ್ತದೆ ಎಂದರು.

ಬಿಜೆಪಿ ತಾನು ಅಧಿಕಾರಕ್ಕೆ ಬಂದರೆ ಐದು ವರ್ಷಗಳಲ್ಲಿ ನೀರಾವರಿ ಉದ್ದೇಶಕ್ಕಾಗಿ ರೂ. 1.5 ಲಕ್ಷ ಕೋಟಿ ಖರ್ಚು ಮಾಡುವುದಾಗಿ ತನ್ನ ಪ್ರಣಾಳಿಕೆಯಲ್ಲಿ ಭರವಸೆ (4ನೇ ಪುಟಕ್ಕೆ)

# ರಾತ್ರಿ ಕರ್ಫ್ಯೂ ರದ್ದು

## ಕ್ಲಬ್, ಬಾರ್, ರೆಸ್ಟೋರೆಂಟ್‌ಗಳಿಗೆ ಪೂರ್ಣ ಅನುಮತಿ

## ಧಾರ್ಮಿಕ ಸ್ಥಳಗಳಲ್ಲಿ ದರ್ಶನ - ಸೇವೆಗೆ ಅವಕಾಶ

ಬೆಂಗಳೂರು, ಜ. 29 - ನಾಳೆ ಸೋಮವಾರದಿಂದ ರಾಜ್ಯಾದ್ಯಂತ ಇರುವ ರಾತ್ರಿ ಕರ್ಫ್ಯೂ ಅನ್ನು ರದ್ದುಪಡಿಸಲು ಸರ್ಕಾರ ನಿರ್ಧರಿಸಿದೆ.


ಕೊರೊನಾ ಸಕ್ರಿಯ ಪ್ರಕರಣಗಳ ಸಂಖ್ಯೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿರುವ ಹಿನ್ನೆಲೆಯಲ್ಲಿ ರಾತ್ರಿ ಕರ್ಫ್ಯೂ ರದ್ದು ಮಾಡಲಾಗಿದೆ. ಕ್ಲಬ್, ಪಬ್, ರೆಸ್ಟೋರೆಂಟ್ ಬಾರ್ ಹಾಗೂ ಹೋಟೆಲ್‌ಗಳಲ್ಲಿ ಪೂರ್ಣ ಸಾಮರ್ಥ್ಯದಡಿ ಕಾರ್ಯನಿರ್ವಹಿಸಲು ಅವಕಾಶ ನೀಡಿದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಕೊರೊನಾ ಸ್ಥಿತಿಗತಿ ಕುರಿತು ತಜ್ಞರೊಟ್ಟಿಗೆ ಸಮಾಲೋಚನೆ ನಡೆಸಿದ ನಂತರ ಸರ್ಕಾರ ಈ ಮಹತ್ವದ ತೀರ್ಮಾನ ಕೈಗೊಂಡಿದೆ.

ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್. ಅಶೋಕ್, ಕೋವಿಡ್-19 ಪಾಸಿಟಿವಿಟಿ ದರ ಶೇ. 33 ರಿಂದ 20ಕ್ಕೆ ಕುಸಿದಿದೆ. ಅಲ್ಲದೆ ಆಸ್ಪತ್ರೆಗೆ ದಾಖಲಾಗುವವರ ಸಂಖ್ಯೆ ಶೇ. 5 ರಿಂದ 2ಕ್ಕೆ ಇಳಿದಿದೆ ಎಂದಿದ್ದಾರೆ.

ಈ ಹಿನ್ನೆಲೆಯಲ್ಲಿ ಕೆಲವು ನಿರ್ಬಂಧಗಳನ್ನು ಸಡಲಿಸಿ, ಮತ್ತೆ ಕೆಲವಷ್ಟು ನಿರ್ಬಂಧಗಳನ್ನು ಮುಂದುವರೆಸಿದ್ದೇವೆ. ಬೆಂಗಳೂರು ನಗರದಲ್ಲಿ ಜನವರಿ 31 ರ ಸೋಮವಾರದಿಂದ ಶಾಲೆ, ಕಾಲೇಜುಗಳನ್ನು ತೆರೆಯಲು ತೀರ್ಮಾನಿಸಲಾಯಿತು ಎಂದರು.

ಮೆಟ್ರೋ ರೈಲು ಸೇರಿದಂತೆ ಸಾರ್ವಜನಿಕ ಸಾರಿಗೆ ವ್ಯವಸ್ಥೆಗಳು ತಮ್ಮ ಆಸನ ಸಾಮರ್ಥ್ಯದಷ್ಟೇ ಪ್ರಯಾಣಿಕರೊಂದಿಗೆ ಕಾರ್ಯಾಚರಣೆ ನಡೆಸಬಹುದು. ಸರ್ಕಾರದ ಸಚಿವಾಲಯದಲ್ಲಿ ಶೇ.100ರಷ್ಟು ಸಿಬ್ಬಂದಿ ಕಾರ್ಯನಿರ್ವಹಿಸಲು ಅವಕಾಶ ನೀಡಲಾಗಿದೆ.



ಧಾರ್ಮಿಕ ಸ್ಥಳಗಳಲ್ಲಿ ದರ್ಶನ ಹಾಗೂ ಸೇವೆಗೆ ಅವಕಾಶ ನೀಡಲಾಗುವುದು. ಆದರೆ, ಶೇ. 50ರ ಸಾಮರ್ಥ್ಯದಲ್ಲಿ ಪ್ರವೇಶಾವಕಾಶ ಕಲ್ಪಿಸಲಾಗುವುದು.

ಸಿನಿಮಾ, ಮಲ್ಟಿಪ್ಲೆಕ್ಸ್, ಥಿಯೇಟರ್‌ಗಳು, ರಂಗಮಂದಿರಗಳು, ಆಡಿಟೋರಿಯಂಗಳು ಮತ್ತು ಇತರೆ ಸ್ಥಳಗಳು ಹಿಂದಿನಂತೆಯೇ ಶೇ. 50 ರ ಆಸನ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸಲಿವೆ. ವಿವಾಹ ಸಮಾರಂಭಗಳಿಗೆ ತೆರೆದ ಸ್ಥಳದಲ್ಲಿ 300 ಜನರಿಗೆ ಹಾಗೂ ಮುಚ್ಚಿದ ಸ್ಥಳಗಳಲ್ಲಿ 200 ಜನರಿಗೆ ಅವಕಾಶ ನೀಡಲಾಗಿದೆ.

ಎಲ್ಲ ಸಾಮಾಜಿಕ, ಧಾರ್ಮಿಕ ಮತ್ತು ರಾಜಕೀಯ ಸಮಾವೇಶ, ಧರಣಿ, ಸಮಾವೇಶ, ಪ್ರತಿಭಟನೆಗಳ ನಿಷೇಧವನ್ನು ಮುಂದುವರೆ ಸಲಾಗಿದೆ. ಸ್ವಿಮ್ಮಿಂಗ್ ಪೂಲ್, ಜಿಮ್ ಗಳು ಶೇ. 50 ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸಬೇಕಿದೆ. ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಮತ್ತು ಕ್ರೀಡಾಂಗಣಗಳಲ್ಲಿ ಶೇ. 50 ಸಾಮರ್ಥ್ಯದೊಂದಿಗೆ ಕಾರ್ಯ ನಿರ್ವಹಿಸಬಹುದಾಗಿದೆ. ಕೇರಳ, ಮಹಾರಾಷ್ಟ್ರ, ಗೋವಾ ಗಡಿಗಳಲ್ಲಿ ತೀವ್ರ ನಿಗಾ ವಹಿಸುವುದು. ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್ (5ನೇ ಪುಟಕ್ಕೆ)

### ಕೊರೊನಾ ಬಂದರೂ ಶಾಲೆ ಮುಚ್ಚದು

**ಶಾಲೆಗಳಲ್ಲಿ ಕೊರೊನಾ ಸೋಂಕು ಬಂದರೆ ಇಡೀ ಶಾಲೆಯನ್ನೇ ಮುಚ್ಚುವ ಕ್ರಮವನ್ನು ರಾಜ್ಯ ಸರ್ಕಾರ ಕೈ ಬಿಟ್ಟಿದೆ. ಈ ಬಗ್ಗೆ ಹೇಳಿಕೆ ನೀಡಿರುವ ಶಿಕ್ಷಣ ಸಚಿವ ಬಿ.ಸಿ. ನಾಗೇಶ್, ಇನ್ನು ಮುಂದೆ ಮಕ್ಕಳಲ್ಲಿ ಕೊರೊನಾ ಕಂಡು ಬಂದರೆ ಆ ಮಕ್ಕಳಿರುವ ತರಗತಿಗಳನ್ನು ಮಾತ್ರ ಮುಚ್ಚಲಾಗುವುದು ಎಂದಿದ್ದಾರೆ. ಈ ತರಗತಿ ಹೊರತು ಪಡಿಸಿ ಶಾಲೆ ಸಾಮಾನ್ಯದಂತೆ ಕಾರ್ಯ ನಿರ್ವಹಿಸಲಿದೆ. ಕೊರೊನಾ ಸೋಂಕಿತ ಮಕ್ಕಳಿದ್ದ ತರಗತಿಗಳನ್ನು ಎಷ್ಟು ದಿನ ಮುಚ್ಚಬೇಕು ಎಂಬುದನ್ನು ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ನಿರ್ಧರಿಸಲಿದ್ದಾರೆ ಎಂದು ಸಚಿವ ನಾಗೇಶ್ ಹೇಳಿದ್ದಾರೆ.**

# ಫೆ.27 ರಿಂದ ಪಲ್ಸ್ ಪೋಲಿಯೋ

### ಜಿಲ್ಲೆಯಲ್ಲಿ 1,60,257 ಮಕ್ಕಳಿಗೆ ಲಸಿಕೆ ಗುರಿ

ದಾವಣಗೆರೆ, ಜ.29- ಫೆ.27 ರಿಂದ ಮಾ. 2ರವರೆಗೆ ಜಿಲ್ಲೆಯಾದ್ಯಂತ ಪಲ್ಸ್ ಪೋಲಿಯೋ ಅಭಿಯಾನ ನಡೆಯಲಿದ್ದು ವಿವಿಧ ಇಲಾಖೆಗಳು ಸಹಕಾರ ನೀಡುವ ಮೂಲಕ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹೇಳಿದರು.

ಶನಿವಾರ ನಗರದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕಛೇರಿಯಲ್ಲಿ ನಡೆದ 2021-22ನೇ ಸಾಲಿನ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನದ ಪೂರ್ವ ಸಿದ್ಧತಾ ಸಭೆ ಹಾಗೂ ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನದ ಜಿಲ್ಲಾ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮನೆ-ಮನೆಗೆ ತೆರಳಿ ಬೂತ್‌ಗೆ ಬರಲು ಆಗದೇ ಇರುವ ಮಕ್ಕಳಿಗೆ ಲಸಿಕೆ ನೀಡಬೇಕು, ಬಸ್‌ಸ್ಟ್ಯಾಂಡ್‌ಗಳಲ್ಲಿ ಲಸಿಕಾ ಕಾರ್ಯಕ್ರಮದ ಬೂತ್ ನಿರ್ಮಿಸಿ ಬೇರೆಡೆಗೆ ತೆರಳುವ ಮಕ್ಕಳಿಗೂ ತಪ್ಪದೇ ಲಸಿಕೆ ನೀಡುವ ಮೂಲಕ ಅಭಿಯಾನವನ್ನು ಯಶಸ್ವಿಗೊಳಿಸಬೇಕೆಂದು ಹೇಳಿದರು. (5ನೇ ಪುಟಕ್ಕೆ)

# ಬ್ಯಾಕ್‌ಲಾಗ್ ಹುದ್ದೆ ಮೂರು ತಿಂಗಳಲ್ಲಿ ಭರ್ತಿ: ಕಾರಜೋಳ

ಬೆಂಗಳೂರು, ಜ. 29 - ಸರ್ಕಾರದ ವಿವಿಧ ಇಲಾಖೆಗಳಲ್ಲಿ ಮತ್ತು ನಿಗಮ ಮಂಡಳಿ ಹಾಗೂ ಶಿಕ್ಷಣ ಸಂಸ್ಥೆಗಳಲ್ಲಿ ಖಾಲಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಮೂರು ತಿಂಗಳಲ್ಲಿ ಭರ್ತಿ ಮಾಡುವುದಾಗಿ ಜಲಸಂಪನ್ಮೂಲ ಸಚಿವ ಗೋವಿಂದ್ ಕಾರಜೋಳ ತಿಳಿಸಿದ್ದಾರೆ.

ಬ್ಯಾಕ್‌ಲಾಗ್ ಹುದ್ದೆಗಳ ನೇಮಕಾತಿ ಉಸ್ತುವಾರಿ ಸಮಿತಿ ಸಭೆಯ ನಂತರ ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಅವರು, ರಾಜ್ಯ ಸರ್ಕಾರದ ಸರ್ಕಾರಿ ಕಾಲೇಜುಗಳಲ್ಲಿ, ಅನುದಾನಿತ ಕಾಲೇಜುಗಳಲ್ಲಿ, ಅನುದಾನಿತ ತಾಂತ್ರಿಕ ಕಾಲೇಜುಗಳಲ್ಲಿ ಮತ್ತು ವಿವಿಧ ವಿಶ್ವ ವಿದ್ಯಾಲಯಗಳಲ್ಲಿ (5ನೇ ಪುಟಕ್ಕೆ)

# ಗರ್ಭಿಣಿಯರ ನೇಮಕದ ಎಸ್‌ಬಿಐ ನಿಯಮ ವಾಪಸ್

ಬೆಂಗಳೂರು, ಜ. 25 -ಗರ್ಭಿಣಿ ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳುವ ಕುರಿತು ಎಸ್.ಬಿ.ಐ. ಹೊರಡಿಸಿದ್ದ ಆದೇಶ ಟೀಕೆಗೆ ಕಾರಣವಾದ ನಂತರ, ಅದನ್ನು ವಾಪಸ್ ಪಡೆಯಲಾಗಿದೆ.

ಬ್ಯಾಂಕಿಂಗ್ ನೇಮಕಾತಿಗೆ ಸಂಬಂಧಿಸಿದಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಇತ್ತೀಚೆಗೆ ಮಾರ್ಗಸೂಚಿಗಳನ್ನು ಪ್ರಕಟಿಸಿತ್ತು. ಹೊಸ ನಿಯಮಗಳ ಅನ್ವಯ ಮೂರು ತಿಂಗಳಿಗೂ ಹೆಚ್ಚು ಕಾಲದ ಗರ್ಭಿಣಿಯಾದವರನ್ನು ತಾತ್ಕಾಲಿಕವಾಗಿ ಅನರ್ಹರು' ಎಂದು ಪರಿಗಣಿಸಲಾಗುತ್ತಿತ್ತು. ಹೆರಿಗೆಯ ನಾಲ್ಕು ತಿಂಗಳ ನಂತರವೇ ಅವರು ನೇಮಕಾತಿಗೆ ಅರ್ಹತೆ (5ನೇ ಪುಟಕ್ಕೆ)

# ಗಂಭೀರ ಪ್ರಕರಣ : ಚುನಾವಣಾ ನಿಷೇಧಕ್ಕೆ ಸುಪ್ರೀಂ ವಿಚಾರಣೆ

ನವದೆಹಲಿ, ಜ. 29 -ಗಂಭೀರ ಅಪರಾಧಿಕ ಪ್ರಕರಣಗಳನ್ನು ಎದುರಿಸುತ್ತಿರುವವರು ಚುನಾವಣೆಗೆ ಸ್ಪರ್ಧಿಸದಂತೆ ಅನರ್ಹಗೊಳಿಸುವ ಅರ್ಜಿಯ ವಿಚಾರಣೆ ನಡೆಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳು ಸಮೀಪಿಸುತ್ತಿರುವ ನಡುವೆ ನ್ಯಾಯಾಲಯ ಈ ನಿರ್ಧಾರ ತೆಗೆದುಕೊಂಡಿದೆ. ಮುಖ್ಯ ನ್ಯಾಯಮೂರ್ತಿ ಎನ್.ವಿ. ರಮಣ ಅವರ ನೇತೃತ್ವದ ಪೀಠ ವಿಚಾರಣೆ ನಡೆಸಲಿದೆ. ಬಿಜೆಪಿ ನಾಯಕ ಅಶ್ವಿನಿ ಉಪಾಧ್ಯಾಯ್ ಅವರು 2020ರಲ್ಲಿ ಈ ಕುರಿತು (3ನೇ ಪುಟಕ್ಕೆ)

# ಅಕ್ರಮ ಬ್ರಾಂದಿ ಮಾರಾಟ ತಡೆಗೆ ಆಗ್ರಹ

## ಜಿಲ್ಲಾ ಮಟ್ಟದ ಎಸ್.ಸಿ, ಎಸ್.ಟಿ, ಕುಂದು ಕೊರತೆ ಸಭೆಯಲ್ಲಿ ಸಮಸ್ಯೆಗಳ ಅನಾವರಣ



ದಾವಣಗೆರೆ, ಜ.29- ಎಸ್ಪಿ ಸಿ.ಬಿ. ರಿಷ್ಯಂತ್ ಅಧ್ಯಕ್ಷತೆಯಲ್ಲಿ ಅವರ ಕಚೇರಿಯಲ್ಲಿಂದು ನಡೆದ ಎಸ್.ಸಿ, ಎಸ್.ಟಿ ಕುಂದುಕೊರತೆ ಸಭೆಯಲ್ಲಿ ಮುಖಂಡರು ಹಲವಾರು ಸಮಸ್ಯೆಗಳನ್ನು ಗಮನಕ್ಕೆ ತಂದರು.

ಮುಖಂಡರಾದ ಸೊರಟೂರು ಹನುಮಂತಪ್ಪ ಮಾತನಾಡಿ, ಕಡದಕಟ್ಟೆಯ ಹಲವು ಮನೆಗಳಲ್ಲಿ ಬ್ರಾಂದಿ ಮಾರಾಟ ಎಗ್ಗಿಲ್ಲದೇ ನಡೆಯುತ್ತಿದ್ದು, ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು.

ಬೆನಕನಹಳ್ಳಿ ಹನುಮಂತಪ್ಪ ಮಾತನಾಡಿ, ಬೆನಕನಹಳ್ಳಿಯಲ್ಲಿ 4 ಸ್ಮಶಾನಗಳಿದ್ದು, ಒಂದು ಸ್ಮಶಾನಕ್ಕೆ ವೀರಶೈವ ಸ್ಮಶಾನ ಎಂದು ಬೋರ್ಡ್ ಹಾಕಿಕೊಂಡಿದ್ದು ಅದು ಸರ್ಕಾರಿ ಗೋಮಾಳವಾಗಿರುತ್ತದೆ ಎಂದಾಗ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರತಿಕ್ರಿಯಿಸಿ, ಅದು ಸರ್ಕಾರಿ ಜಾಗವಾಗಿದ್ದರೆ ಬೋರ್ಡ್ ಬದಲಿಸಿ ಸರ್ಕಾರಿ ಸ್ಮಶಾನ ಎಂದು ನಾಮಫಲಕ ಹಾಕಿಸಲು ಸೂಚಿಸಿದರು. ಹೊನ್ನಾಳಿ ದಲಿತ ಕಾಲೋನಿಗಳಲ್ಲಿ ಹಲವಾರು ಸಮಸ್ಯೆಗಳಿದ್ದು ಬೀಟ್ ಸರಿಯಾಗಿ ಆಗುತ್ತಿಲ್ಲ, ಸದ್ಯದಲ್ಲೇ ಮಾರಿ ಜಾತ್ರೆ ಇದ್ದು ಕೋಣನ ಬಲಿ ನಿಷೇಧಿಸಬೇಕು ಮತ್ತು ಬೇವಿನ ಸೊಪ್ಪು ಕಟ್ಟಿಕೊಂಡು ಸಲ್ಲಿಸುವ ಸೇವೆಯನ್ನು ತಡೆಯಬೇಕೆಂದರು.

ಹರಿಹರ ವಿಶ್ವನಾಥ್ ಮಾತನಾಡಿ, ಗುತ್ತೂರು ಗ್ರಾ.ಪಂ. ಪಿಡಿ.ಓ ಗಣರಾಜ್ಯೋತ್ಸವದಂದು ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಫೋಟೋ ಇಟ್ಟಿಲ್ಲ ಅವರ ವಿರುದ್ಧ ದೂರು ನೀಡಿದ್ದರೂ ಕ್ರಮ ಜರುಗಿಸಿಲ್ಲ, ಕೂಡಲೇ ಅವರ ವಿರುದ್ಧ ಕ್ರಮ ಜರುಗಿಸಬೇಕೆಂದರು.

ಉಚ್ಚಂಗಿ ಪ್ರಸಾದ್ ಮಾತನಾಡಿ, ಸಂತೇಬೆನ್ನೂರು ಸ್ಮಶಾನ ಬೇರೆಯವರ ಹೆಸರಲ್ಲಿದ್ದು ಅವರು ಬರೆದುಕೊಡಲು ಒಪ್ಪಿದ್ದಾರೆ. ಎರಡೂ ಕಡೆಯವರು ಒಪ್ಪಿಕೊಂಡಿದ್ದರೂ ಚನ್ನಗಿರಿ ತಹಶೀಲ್ದಾರ್ ಸ್ಪಂದಿಸಿತ್ತಿಲ್ಲ. ಕಂದಗಲ್ ಗ್ರಾಮದಲ್ಲಿ ವಿಧವೆಯೊಬ್ಬರ ಮನೆ ಬಿದ್ದಿದ್ದು, ಮನೆ ಮಂಜೂರಿಗೆ ಕೇಳಿದರೆ ಪಿಡಿಒ ಉಡಾಫೆ ಉತ್ತರ ನೀಡುತ್ತಾರೆಂದರು.

ಜಿ.ಪಂ. ಮಾಜಿ ಅಧ್ಯಕ್ಷ ಡಾ. ವೈ.ರಾಮಪ್ಪ ಮಾತನಾಡಿ, ಜಾತಿ ನಿಂದನೆ ಕೇಸ್ ಹಾಕಿದವರ ವಿರುದ್ಧ ಪ್ರತಿ ದೂರು ದಾಖಲಿಸಲಾಗುತ್ತಿದೆ. ಇದು ಆಗದಂತೆ ತಡೆಯಬೇಕು ಎಂದಾಗ ಎಸ್.ಪಿಯವರು ಪ್ರತಿಕ್ರಿಯಿಸಿ, ಹಾಗೆ ಮಾಡಲು ಬರುವುದಿಲ್ಲ. ಯಾರೇ ದೂರು ಕೊಟ್ಟರೂ ಸ್ವೀಕರಿಸಲೇಬೇಕಾಗುತ್ತದೆ ಎಂದರು

ಪೇಪರ್ ಚಂದ್ರಣ್ಣ ಮಾತನಾಡಿ, ದಾವಣಗೆರೆ ಭಾಗೀರಥಿ ಸರ್ಕಲ್ ಸುತ್ತಮುತ್ತ ರಾತ್ರಿ ವೇಳೆ ಪೆಟ್ರೋಲ್ ಕದಿಯುವವರ ಹಾವಳಿ ಹೆಚ್ಚಿದ್ದು ಕ್ರಮ ಜರುಗಿಸಬೇಕೆಂದರು.

ಎಸೊಳ್ಳೆ ತಿಮ್ಮಣ್ಣ ಮಾತನಾಡಿ, ಖಾಜಿಪುರ ಗ್ರಾಮದಲ್ಲಿ ಹೆಣ್ಣುಮಗಳೊಬ್ಬಳ ಮೇಲೆ ದೌರ್ಜನ್ಯ ಆಗಿದ್ದು ಎಫ್.ಐ.ಆರ್. (3ನೇ ಪುಟಕ್ಕೆ)

# ಭರಮಸಾಗರ ದೊಡ್ಡಕೆರೆ ಏರಿ ಬಿರುಕು : ಆತಂಕದಲ್ಲಿ ಜನ



**ಬಿ.ಜೆ. ಅನಂತಪದ್ಮನಾಭರಾವ್**

ಭರಮಸಾಗರ, ಜ.29- ಇಲ್ಲಿಯ ಭರಮಣ್ಣನಾಯಕನ ದೊಡ್ಡಕೆರೆ ಏರಿ ಮೇಲಿನ ರಸ್ತೆಯಲ್ಲಿ ಬಿರುಕು ಕಾಣಿಸಿಕೊಂಡಿದ್ದು, ನಾಗರಿಕರು ಆತಂಕಗೊಂಡಿದ್ದಾರೆ.

ಭರಮಸಾಗರದಿಂದ ರಂಗೇನಹಳ್ಳಿ, ಇಸಾಮುದ್ರ, ಕಾಲ್ಗೆರೆ, ಹೊಸಹಟ್ಟಿ, ನೆಲ್ಲಿಕಟ್ಟೆ, ಅಜ್ಜಪ್ಪನಹಳ್ಳಿ, ಸುಲ್ತಾನಿಪುರ, ಬಿದರಕೆರೆ, ದೊಣ್ಣೆಹಳ್ಳಿ ಸೇರಿದಂತೆ ಅನೇಕ ಗ್ರಾಮಗಳಿಗೆ ಈ ರಸ್ತೆ ಮೂಲಕವೇ ಸಂಚರಿಸಬೇಕು. ಈ ಕೆರೆ ಸಣ್ಣ ನೀರಾವರಿ ಇಲಾಖೆಗೆ ಸೇರಿದೆ, ಕೆಲ ವರ್ಷಗಳ ಹಿಂದೆ ಕೆರೆ ಏರಿ ಪಕ್ಕದಲ್ಲಿ ಇದ್ದ ಚಿಕ್ಕ ರಸ್ತೆಯನ್ನು ತೆರವುಗೊಳಿಸಿ ಏರಿ ವಿಸ್ತರಿಸಿ ಎತ್ತರಗೊಳಿಸಿ ಡಾಂಬರ್ ರಸ್ತೆ ನಿರ್ಮಾಣ ಮಾಡಲಾಗಿದೆ.

11 ವರ್ಷಗಳ ಕಾಲ ಕೆರೆಯಲ್ಲಿ ನೀರು ಇಲ್ಲದ ಕಾರಣ ಏರಿಯಲ್ಲಿನ ಲೋಪಗಳು ವ್ಯಕ್ತವಾಗಿರಲಿಲ್ಲ. ಸಿರಿಗೆರೆಯ ತರಳಬಾಳು ಮಠದ ಸ್ವಾಮೀಜಿಯವರ ಶ್ರಮದಿಂದ ಸರ್ಕಾರದ ಏತ ನೀರಾವರಿ ಯೋಜನೆಯ ಅಡಿ ಹರಿಹರದಿಂದ ತುಂಗಭದ್ರೆಯ ನೀರು ದೊಡ್ಡಕೆರೆ ಸೇರುವ ಮೂಲಕ ಕೆರೆ ತುಂಬಿ ಕೋಡಿ ಬಿದ್ದಿದೆ. 1,000 (4ನೇ ಪುಟಕ್ಕೆ)

# ಮಠ, ಮಂದಿರ, ಮಸೀದಿಗಳಲ್ಲಿ ಸಂವಿಧಾನದ ಪಠಣವಾದಾಗ ಮಾತ್ರ ಜನರಲ್ಲಿ ಜಾಗೃತಿ ಸಾಧ್ಯ

## ಬಂಧುತ್ವ ಬಲಪಡಿಸುವ ವಿಭಾಗೀಯ ಸಂಘಟನಾ ಸಮಾವೇಶದಲ್ಲಿ ಶ್ರೀ ಶಾಂತ ಭೀಷ್ಮ ಸ್ವಾಮೀಜಿ ಅಭಿಮತ



ಹರಿಹರ, ಜ.29- ಶತ ಶತಮಾನಗಳಿಂದ ದೇಶದಲ್ಲಿರುವ ಅಸ್ಪೃಶ್ಯತೆ, ಮೂಢನಂಬಿಕೆ, ಅಸಮಾನತೆ ವಿರುದ್ಧ ಸಾಮಾಜಿಕ ಕ್ರಾಂತಿ ಮಾಡಿದ ಬುದ್ಧ, ಬಸವ, ಅಂಬೇಡ್ಕರ್ ಅವರಿಂದಾಗಿ ಇವತ್ತು ನಾವು - ನೀವೆಲ್ಲರೂ ಇಲ್ಲಿ ಒಟ್ಟಾಗಿ ಕುರಿತು ಚರ್ಚೆ ಮಾಡುವಷ್ಟು ಜಾಗೃತಿ ಹೊಂದಿದ್ದೇವೆ ಎಂದು ಸುಕ್ಷೇತ್ರ ನರಸೀಪುರದ ನಿಜಶರಣ ಅಂಬಿಗರ ಚೌಡಯ್ಯ ಗುರುಪೀಠದ ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಹೇಳಿದರು.

ಹರಿಹರ ಬೈಪಾಸ್ ಬಳಿ ಇರುವ ಪ್ರೊ. ಬಿ. ಕೃಷ್ಣಪ್ಪ ಸಾಂಸ್ಕೃತಿಕ ಭವನದಲ್ಲಿ ಸತೀಶ್ ಜಾರಕಿಹೊಳಿ ನೇತೃತ್ವದ ಮಾನವ ಬಂಧುತ್ವ ವೇದಿಕೆ ವತಿಯಿಂದ ಬಂಧುತ್ವ ಬಲಪಡಿಸಲು ಇಂದು ಹಮ್ಮಿಕೊಂಡಿದ್ದ ವಿಭಾಗೀಯ ಮಟ್ಟದ ಸಂಘಟನಾ ಸಮಾವೇಶವನ್ನು ಸಂವಿಧಾನದ ಪೀಠಿಕೆ ಓದುವ ಮೂಲಕ ಸ್ವಾಮೀಜಿ ಕಾರ್ಯಕ್ರಮವನ್ನು ಉದ್ಘಾಟಿಸಿದರು.

ಸಂವಿಧಾನ ಇಲ್ಲದಿದ್ದರೆ ಸಮಾನತೆ ಕನಸಿನ ಮಾತಾಗಿತ್ತು. ಅಂತಹ ಪವಿತ್ರ ಸಂವಿಧಾನಕ್ಕೆ ಅಪಮಾನ, ಅಪಚಾರ ಮಾಡುವ ಕೆಲಸ ದೇಶದಲ್ಲಿ ನಡೆಯುತ್ತಿದ್ದು, ಇದರ ವಿರುದ್ಧ ನಾವೆಲ್ಲರೂ ಜಾಗೃತಗೊಳ್ಳಬೇಕಿದೆ. ಭಾರತದಲ್ಲಿ ಸಂವಿಧಾನವೇ ನಿಜವಾದ ಧರ್ಮಗ್ರಂಥವಾಗಿದ್ದು, ಅದನ್ನು ಗೌರವಿಸುವ ಕೆಲಸವನ್ನು ಪ್ರತಿಯೊಬ್ಬರೂ ಮಾಡಿದಾಗ ಮಾತ್ರ ನಿಜವಾದ ಸಮಾನತೆ ಜಾರಿಗೆ ಬರುತ್ತದೆ ಎಂದು ಸ್ವಾಮೀಜಿ ಪ್ರತಿಪಾದಿಸಿದರು.

ಮಠ, ಮಂದಿರ, ಚರ್ಚ್, ಮಸೀದಿಗಳಲ್ಲಿ ಸಂವಿಧಾನದ ಪಠಣ ಆಗಬೇಕು. ಜೊತೆಗೆ ಮಾಧ್ಯಮ ಕ್ರಾಂತಿ ಮೂಲಕ ಸಂವಿಧಾನಕ್ಕೆ ಇನ್ನಷ್ಟು ಬಲ ತಂದು ಕೊಡುವ ಕೆಲಸ ಆಗಬೇಕೆಂದರು. ಇಲ್ಲಿ ವ್ಯಕ್ತಿಗಿಂತ ತತ್ವ, ಆದರ್ಶ, ಸಮಾನತೆ ಬಹಳ ಮುಖ್ಯವಾಗಿದೆ. ವಿಜ್ಞಾನ ಎಷ್ಟೆಲ್ಲಾ ಸಾಧನೆ ಮಾಡಿದ್ದರೂ ಹಳ್ಳಿಗಳಲ್ಲಿ ಮಾತ್ರ ಮಾರಿ ಹಬ್ಬಗಳ ಮೂಲಕ ಜನರನ್ನು ಮೌಢ್ಯಕ್ಕೆ ತಳ್ಳುವ ಕೆಲಸ ನಿರಂತರವಾಗಿ ನಡೆಯುತ್ತಿದೆ. ಮಾರಿ ಹಬ್ಬದ ಹೆಸರಿನಲ್ಲಿ ದಲಿತರು, ಹಿಂದುಳಿದವರು ಕುರಿ, ಕೋಳಿ, ಕೋಣಗಳನ್ನು ಬಲಿ ಕೊಡುವುದನ್ನು ನಿಲ್ಲಿಸದ ಹೊರತು, ನಮ್ಮ ಜನರ ಅಭಿವೃದ್ಧಿ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಮೌಢ್ಯದ ವಿರುದ್ಧ ರಾಜ್ಯದಲ್ಲಿ ಅರಿವಿನ ಕ್ರಾಂತಿ ಮಾಡುತ್ತಿರುವ ಸತೀಶ್ ಜಾರಕಿಹೊಳಿ ಅವರಿಗೆ ನಮ್ಮೆಲ್ಲರ ಬೆಂಬಲವಿದೆ ಎಂದು ಶ್ರೀ ಶಾಂತ ಭೀಷ್ಮ ಸ್ವಾಮೀಜಿ ಹೇಳಿದರು.

ಸಮಾವೇಶದ ಅಧ್ಯಕ್ಷತೆ ವಹಿಸಿದ್ದ ಶಾಸಕ ಎಸ್. ರಾಮಪ್ಪ ಮಾತನಾಡಿ, ಅಂಬೇಡ್ಕರ್ ನೀಡಿದ ಸಂವಿಧಾನವನ್ನು ಉಳಿಸಿಕೊಳ್ಳಲು ಹೋರಾಟ ಮಾಡುವ ಪರಿಸ್ಥಿತಿ ದೇಶದಲ್ಲಿ ನಿರ್ಮಾಣವಾಗಿದೆ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಅಪಮಾನ ಮಾಡಿರುವ ವ್ಯಕ್ತಿ ಯಾರೇ ಆಗಿದ್ದರೂ ಅವರಿಗೆ ಶಿಕ್ಷೆ ಆಗಬೇಕು. ಸಂವಿಧಾನವನ್ನು ವಿರೋಧಿಸುವವರ ಕೈಗೆ ಆಡಳಿತ ಸಿಗದಂತೆ ದೇಶದಲ್ಲಿ ಜನಜಾಗೃತಿ ಕ್ರಾಂತಿ ಆಗಬೇಕೆಂದು ರಾಮಪ್ಪ ಹೇಳಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಮಾನವ ಬಂಧುತ್ವ ವೇದಿಕೆಯ ವಿಭಾಗೀಯ ಸಂಚಾಲಕ ಅನಂತನಾಯ್ಕ ಅವರು, ಭಾರತದ ಬಹುತ್ವವನ್ನು ನಾಶಪಡಿಸುವ ದೊಡ್ಡ ಷಡ್ಯಂತ್ರ ದೇಶದಲ್ಲಿ ನಡೆಯುತ್ತಿದೆ. ಬಂಧುತ್ವ ಬೆಸೆಯುವ ಕೆಲಸವನ್ನು ಸತೀಶ್ ಜಾರಕಿಹೊಳಿ ಅವರು ಸಿದ್ಧಾಂತ ಮತ್ತು ಚಳುವಳಿಯನ್ನು ಬೆಸೆಯುವ ಮೂಲಕ ಮಾಡುತ್ತಿದ್ದಾರೆ. ಅದಕ್ಕಾಗಿ ಈ ಸಮಾವೇಶ ನಡೆಸುತ್ತಿದ್ದೇವೆ ಎಂದರು.

ನಗರಸಭೆ ಮಾಜಿ (6ನೇ ಪುಟಕ್ಕೆ)


## ಜನ್ಮ ದಿನದ ಶುಭಾಶಯಗಳು...



ದಿ|| ಜಗಳೂರು ಮಹಾಲಿಂಗಪ್ಪ ದಿ|| ಬಸಮ್ಮನವರ ಮರಿಮೊಮ್ಮಗ
ಶ್ರೀ ಬಸವರಾಜಪ್ಪ ದಿ|| ಚನ್ನವೀರಮ್ಮನವರ ಮೊಮ್ಮಗ
ಶ್ರೀ ರುದ್ರಮುನಿ ಶ್ರೀಮತಿ ದ್ರಾಕ್ಷಾಯಣಮ್ಮ
ಇವರ ಜೇಷ್ಠ ಪುತ್ರ, ಜಗಳೂರು.

ರೈಸ್‌ಮಿಲ್ ಮಾಲೀಕರಾದ
**ಶ್ರೀ ಆರ್. ಆದರ್ಶ ಜಗಳೂರು**

ಇವರು ತಮ್ಮ 27ನೇ ವರ್ಷದ ಹುಟ್ಟುಹಬ್ಬವನ್ನು ಆಚರಿಸಿಕೊಳ್ಳುತ್ತಿರುವ
ಇವರಿಗೆ ಶುಭ ಕೋರುವವರು...

| | | |
|---|---|---|
| ❋ ಬಾಬು | ❋ ಕರೀಂ ಬಾಷ | ❋ ಕಂಠಪ್ಪ |
| ❋ ಶಿವಣ್ಣ | ❋ ಹನುಮಂತಪ್ಪ | ❋ ಹನುಮಂತಪ್ಪ |
| ❋ ಬಸವರಾಜು | ❋ ನಾಗಣ್ಣ | ❋ ವಜೀರ್ ಸಾಬ್ |
| ❋ ನಿಂಗಪ್ಪ | ❋ ಮೂರ್ತಿ | ❋ ರಂಗಪ್ಪ |
| ❋ ಮಂಜುನಾಥ್ ಎಂ. | ❋ ಜಂಗ್ಲಿಮಂಜು | ❋ ಸಂಗೀತಮ್ಮ |
| ❋ ಚಂದ್ರಪ್ಪ | ❋ ಲೋಕೇಶ್ | ❋ ರೇಣುಕಮ್ಮ |
| ❋ ಸಂತೋಷ್ | ❋ ಗಣೇಶ | ❋ ಬಾಬು |
| ❋ ರಫೀಕ್ | ❋ ಮೂಗಪ್ಪ | ❋ ಹನುಮಂತಪ್ಪ |
| ❋ ಮಂಜು | ❋ ಸುನೀಲ್ | ❋ ಗಣೇಶ |
| | | ❋ ಮೂರ್ತಿ |

ಸಿಬ್ಬಂದಿ ವರ್ಗ, ಜಗಳೂರು ರೈಸ್‌ಮಿಲ್ ಹಾಗೂ ಜಗಳೂರು ಮಹಾಲಿಂಗಪ್ಪ ಎಂಟರ್‌ಪ್ರೈಸಸ್,
ಶ್ರೀ ಮೈಲಾರ ಲಿಂಗೇಶ್ವರ ರೈಸ್ ಇಂಡಸ್ಟ್ರೀಸ್, ಭಾರತ್ ಕಾಲೋನಿ, ದಾವಣಗೆರೆ.

## ರಾಣೇಬೆನ್ನೂರಿಗಿಂದು ರಂಭಾಪುರಿ ಶ್ರೀ



ರಂಭಾಪುರಿ ಪೀಠದ ಜಗದ್ಗುರು ಡಾ. ವೀರ ಸೋಮೇಶ್ವರ ರಾಜದೇಶೀಕೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳವರು ಇಂದು ನಗರಕ್ಕೆ ಆಗಮಿಸಲಿದ್ದಾರೆ. ಬೆಳಿಗ್ಗೆ 8 ಘಂಟೆಗೆ ಹಿರೇಮಠ ಶನೈಶ್ಚರ ಮಂದಿರದಲ್ಲಿ ಉಜ್ಜಯನಿ ಲಿಂ. ಸಿದ್ದಲಿಂಗ ಶಿವಾಚಾರ್ಯ ಶ್ರೀಗಳ 85 ನೇ ಪುಣ್ಯ ಸ್ಮರಣೋತ್ಸವದ ಅಂಗವಾಗಿ ಇಷ್ಟಲಿಂಗ ಮಹಾಪೂಜೆ, 63 ಜಂಗಮ ದಂಪತಿಗಳ ಪೂಜೆ, ಮನುಕುಲ ಸದ್ಭಾವನಾ ಧರ್ಮ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸುವರು.

ಕಾರ್ಯಕ್ರಮದ ನೇತೃತ್ವವನ್ನು ಶ್ರೀಮಠದ ಶಿವಯೋಗಿ ಮಹಾಸ್ವಾಮಿಗಳು ವಹಿಸುವರು. ನುಗ್ಗೇಹಳ್ಳಿಯ ಡಾ.ಮಹೇಶ್ವರ, ಕೂಡಲದ ಗುರು ಮಹೇಶ್ವರ, ಬಣ್ಣದ ಮಠದ ಅಭಿನವ, ಹಿರೇಮಠದ ಗುರುಶಾಂತ, ಮುತ್ತಿನಕಂತಿ ಮಠದ ಚಂದ್ರಶೇಖರ, ಹೇರೂರಿನ ನಂಜುಂಡ ಪಂಡಿತಾರಾಧ್ಯ, ಪುಣ್ಯಕೋಟಿಯ ಜಗದೀಶ್ವರ ಮಹಾಸ್ವಾಮೀಜಿ ಭಾಗವಹಿಸುವರು.

ಶಾಸಕ ಅರುಣಕುಮಾರ ಪೂಜಾರ, ಎಸ್.ಎಸ್. ರಾಮಲಿಂಗಣ್ಣನವರ, ಬಸವರಾಜ ಸವಣೂರ ಮತ್ತಿತರರು ಆಗಮಿಸುವರು.

# ಅಂಬೇಡ್ಕರ್‌ಗೆ ಅಪಮಾನ: ನ್ಯಾಯಾಧೀಶರ ಅಮಾನತ್ತಿಗೆ ಆಗ್ರಹ

### ಹರಪನಹಳ್ಳಿಯಲ್ಲಿ ಕಮ್ಯುನಿಸ್ಟ್ ಮತ್ತು ಸಿಐಟಿಯು ಪ್ರತಿಭಟನೆ

ಹರಪನಹಳ್ಳಿ, ಜ.29- ರಾಯಚೂರು ಜಿಲ್ಲಾ ನ್ಯಾಯಾಲಯದ ಆವರಣದಲ್ಲಿ ಗಣರಾಜ್ಯೋತ್ಸವ ಸಮಾರಂಭದಲ್ಲಿ ಇರಿಸಲಾಗಿದ್ದ ಸಂವಿಧಾನ ಶಿಲ್ಪಿ ಡಾ.ಬಿ. ಆರ್. ಅಂಬೇಡ್ಕರ್ ಅವರ ಭಾವಚಿತ್ರ ತೆಗೆದರೆ ಮಾತ್ರ ಧ್ವಜಾರೋಹಣ ನೆರವೇರಿಸುವುದಾಗಿ ಉದ್ಧಟತನದಿಂದ ಹೇಳಿದ ಜಿಲ್ಲಾ ನ್ಯಾಯಾಧೀಶ ಮಲ್ಲಿಕಾರ್ಜುನಗೌಡ ಅವರ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ಹಾಗೂ ಈ ಕೂಡಲೇ ಅಮಾನತ್ತು ಪಡಿಸುವಂತೆ ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷ(ಸಿಪಿಐ) ಹಾಗೂ ಸಿಐಟಿಯು ನೇತೃತ್ವದಲ್ಲಿ ಕಾರ್ಮಿಕ ಸಂಘಟನೆಗಳು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿ, ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಪಕ್ಷದ ಮುಖಂಡರಾದ ಗುಡಿಹಳ್ಳಿ ಹಾಲೇಶ್ ಹಾಗೂ ಎಚ್.ಎಂ. ಸಂತೋಷ್ ಮಾತನಾಡಿ, ನ್ಯಾಯಾಲಯಗಳು ಭಾರತೀಯ ಸಂವಿಧಾನದ ಅಡಿಯಲ್ಲಿಯೇ ಕಾರ್ಯನಿರ್ವಹಿಸುತ್ತಿವೆ. ಸಂವಿಧಾನವನ್ನು ಗೌರವಿಸುವಂತ ಗುರುತರ ಹೊಣೆಗಾರಿಕೆ ನ್ಯಾಯಾಲಯಗಳ ಮೇಲೆ ಇದೆ.



ಆದರೆ, ದುರ್ದೈವದ ಸಂಗತಿ ಎಂದರೆ, ನಾಯಾಧೀಶರೇ ಸಂವಿಧಾನ ಕರ್ತೃ ಬಾಬಾಸಾಹೇಬ್ ಅಂಬೇಡ್ಕರ್ ಅವರಿಗೆ ಅಪಮಾನ ಎಸಗಿದ್ದಾರೆ. ಇದು ಇಡೀ ನ್ಯಾಯಾಂಗ ವ್ಯವಸ್ಥೆಯಲ್ಲಿಯೇ ಒಂದು ಕಪ್ಪುಚುಕ್ಕೆ ಎಂದು ಕಿಡಿಕಾರಿದರು.

ದೇವದಾಸಿ ಮಹಿಳಾ ವಿಮೋಚನಾ ಸಂಘದ ಅಧ್ಯಕ್ಷರಾದ ಟಿ.ವಿ.ರೇಣುಕಮ್ಮ ಮಾತನಾಡಿ, ಸಂವಿಧಾನ ನಿರ್ದೇಶಿಸುವ ಕಾನೂನುಗಳನ್ನು ಕಾಪಾಡುವ ನ್ಯಾಯಾಧೀಶರೇ ಹೀಗೆ ನಡೆದುಕೊಂಡಿರುವುದು ಅತ್ಯಂತ ಅಪಾಯಕಾರಿ ಬೆಳವಣಿಗೆ ಎಂದು ಆತಂಕ ವ್ಯಕ್ತಪಡಿಸಿದರು.

ಕೂಡಲೇ ಇವರು ಇದುವರೆಗೂ ನೀಡಿದ ಆದೇಶಗಳನ್ನು ಮರು ಪರಿಶೀಲಿಸಬೇಕು. ಸಂವಿಧಾನ ಶಿಲ್ಪಿಯ ಕುರಿತು ಹಗುರವಾಗಿ ನಡೆದುಕೊಂಡಿರುವ ಮಲ್ಲಿಕಾರ್ಜುನಗೌಡ ಅವರ ವಿರುದ್ಧ ಹೈಕೋರ್ಟ್ ನ್ಯಾಯಾಧೀಶರು ಕೂಡಲೇ ಕಠಿಣ ಕಾನೂನು ಜರುಗಿಸಬೇಕು ಎಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ರಮೇಶ ನಾಯ್ಕ್, ಬಳಿಗಾನೂರು ಕೊಟ್ರೇಶ್, ದೊಡ್ಡಬಸವರಾಜ್, ಕಡಬಗೇರಿ ದರ್ಶನ್, ದಾದಾಪೀರ್, ಶಿವರಾಜ್, ನಟರಾಜಪ್ಪ ಸಿಐಟಿಯು ರಾಜ್ಯ ಉಪಾಧ್ಯಕ್ಷ ಆರ್.ಎಸ್. ಬಸವರಾಜ, ಜಿಲ್ಲಾಧ್ಯಕ್ಷ ಭಾಸ್ಕರ್‌ರೆಡ್ಡಿ, ಕಾರ್ಮಿಕ ಮುಖಂಡರಾದ ರಮಹತ್, ಹುಲಿಕಟ್ಟಿ ರಾಜಪ್ಪ, ಶಬ್ಬೀರ್, ಮಂಜಪ್ಪ, ಪವಿತ್ರ, ಭರ್ಮಪ್ಪ, ಮಹಾದೇವಪ್ಪ, ಮಲ್ಲಿಕಾರ್ಜುನ ಸೇರಿದಂತೆ ಇತರರು ಇದ್ದರು.

## ಕದಳಿ ವೇದಿಕೆಯಿಂದ ದಾಸಿಮಯ್ಯ ಜಯಂತಿ

ದಾವಣಗೆರೆ, ಜ. 29- ನಗರದ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಂಗ ಸಂಸ್ಥೆ ಕದಳಿ ಮಹಿಳಾ ವೇದಿಕೆಯ ಜಿಲ್ಲಾ ಘಟಕದಿಂದ ನಡೆಯುವ 132ನೇ ಕಮ್ಮಟದಲ್ಲಿ ಶರಣ ಜೇಡರ ದಾಸಿಮಯ್ಯ ಜಯಂತಿ ಹಾಗೂ ಗಣರಾಜ್ಯೋತ್ಸವ ಆಚರಣೆ ಕಾರ್ಯಕ್ರಮ ಕುಸುಮ ಲೋಕೇಶ್ ಅವರ ಅಧ್ಯಕ್ಷತೆಯಲ್ಲಿ ಬರುವ ಫೆಬ್ರವರಿ 1ರ ಮಂಗಳವಾರ ವಾಟ್ಸಾಪ್ ಮುಖಾಂತರ ನಡೆಯಲಿದೆ.

ಈ ಸಂದರ್ಭದಲ್ಲಿ ಡಾ. ಲಿಂಗರಾಜು ದತ್ತಿ ಮತ್ತು ಲಿಂ. ಪಟೇಲ್ ಜಿ. ಜಯಪ್ಪ ಮತ್ತು ಸುಂದರಮ್ಮ ಜಯಪ್ಪ ದತ್ತಿ ಕಾರ್ಯಕ್ರಮ ನಡೆಯಲಿದೆ.

ಎಂ.ಕೆ. ಬಕ್ಕಪ್ಪ, ಜಿ.ಸಿ. ನೀಲಾಂಬಿಕ, ಕದಳಿ ಮಹಿಳಾ ವೇದಿಕೆ ಗೌರವಾಧ್ಯಕ್ಷರಾದ ಸಾವಿತ್ರಮ್ಮ ಸಿದ್ದಪ್ಪ, ಶರಣ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಕೆ.ಬಿ. ಪರಮೇಶ್ವರಪ್ಪ, ಪ್ರಮೀಳಾ ನಟರಾಜ್, ಬೆಂಗಳೂರು ಕದಳಿ ಮಹಿಳಾ ವೇದಿಕೆ ಕೇಂದ್ರ ಸಮಿತಿ ಉಪ ಸಂಚಾಲಕರಾದ ಪ್ರಮೀಳಾ ನಟರಾಜ್ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು.

# ಸಂವಿಧಾನ ಇರದಿದ್ದರೆ ಬಲಾಢ್ಯರ ಮುಷ್ಠಿಯಲ್ಲಿ ಭಾರತವಿರುತ್ತಿತ್ತು

### ಹೊಸಪಾಳ್ಯದಲ್ಲಿ ಸಂವಿಧಾನ ದಿನಾಚರಣೆ ಕಾರ್ಯಕ್ರಮದಲ್ಲಿ ದಸಂಸ ಸಂಚಾಲಕ ಪಿ.ಜೆ. ಮಹಾಂತೇಶ್

ಮಲೇಬೆನ್ನೂರು, ಜ. 29- ಡಾ. ಅಂಬೇಡ್ಕರ್‌ರಂತಹ ಶೋಷಿತ ಸಮಾಜದ ವ್ಯಕ್ತಿ ಸಂವಿಧಾನ ರಚಿಸದೆ ಇದ್ದರೆ ಭಾರತವು ಬಲಾಢ್ಯರ ಕಪಿಮುಷ್ಠಿಯಲ್ಲಿರುತ್ತಿತ್ತು ಎಂದು ದಸಂಸ (ಪ್ರೊ.ಬಿ.ಕೃಷ್ಣಪ್ಪ ಸ್ಥಾಪಿತ) ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಹೇಳಿದರು.

ತಾಲ್ಲೂಕಿನ ಹೊಸಪಾಳ್ಯ ಗ್ರಾಮದಲ್ಲಿ ದಸಂಸ ಗ್ರಾಮ ಘಟಕದಿಂದ ಬುಧವಾರ ಆಯೋಜಿಸಿದ್ದ ಸಂವಿಧಾನ ದಿನಾಚರಣೆ ಉದ್ಘಾಟಿಸಿ ಮಾತನಾಡಿದ ಅವರು ರಾಜ್ಯಾಂಗ, ಕಾರ್ಯಾಂಗ, ಶಾಸಕಾಂಗದ ಇತಿಮಿತಿ, ಧಾರ್ಮಿಕ ಸ್ವಾತಂತ್ರ, ದಲಿತರು, ಮಹಿಳೆ, ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಂವಿಧಾನದಲ್ಲಿ ರಕ್ಷಣೆ ನೀಡಲಾಗಿದೆ.

ಶೋಷಿತರ ಕುರಿತು ಇಂತಹ ರಕ್ಷಣೆ ಒದಗಿಸದೆ ಇದ್ದರೆ ಭಾರತ ಇಂದು ಬಲಾಢ್ಯರ ಕೈಗೊಂಬೆಯಾಗಿರುತ್ತಿತ್ತು. ಒಬ್ಬ ಸಾಮಾನ್ಯ ವ್ಯಕ್ತಿಯೂ ಕೂಡ ಇಂದು ಪ್ರಧಾನಿ, ರಾಷ್ಟ್ರಪತಿ, ಮುಖ್ಯಮಂತ್ರಿ ವಿರುದ್ಧ ಧ್ವನಿ ಎತ್ತಲು ಶಕ್ತಿ ನೀಡಿದ ಖ್ಯಾತಿ ಸಂವಿಧಾನಕ್ಕೆ ಸಲ್ಲುತ್ತದೆ ಎಂದರು.



ಸಂವಿಧಾನವನ್ನು ಎಲ್ಲರೂ ಅಭ್ಯಾಸ ಮಾಡಬೇಕು. ಕಾನೂನಿನ ಜ್ಞಾನ ಇರುವ ವ್ಯಕ್ತಿಗೆ ಯಾರಿಂದಲೂ ಶೋಷಣೆಯಾಗದು. ಧಾರ್ಮಿಕ ಗ್ರಂಥಗಳ ಪಠಣಕ್ಕಿಂತ ಸಂವಿಧಾನ ಅಭ್ಯಾಸಕ್ಕೆ ಹೆಚ್ಚಿನ ಒತ್ತು ನೀಡಬೇಕಿದೆ. ವಿಶೇಷವಾಗಿ ದಲಿತರು ಹಾಗೂ ವಿದ್ಯಾರ್ಥಿಗಳು ಯಾವುದೇ ಕೋರ್ಸ್ ಅಭ್ಯಾಸ ಮಾಡುತ್ತಿದ್ದರೂ ಸಂವಿಧಾನದ ಒಂದು ಪ್ರತಿಯನ್ನು ಖರೀದಿಸಿ ಓದಬೇಕೆಂದರು.

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದ ಗ್ರಾಮ ಪಂಚಾಯ್ತಿ ಅಧ್ಯಕ್ಷ ಭರಮನಗೌಡ ಪಟೇಲ್ ಮಾತನಾಡಿ, ಗ್ರಾಮೀಣ ಭಾಗಕ್ಕೆ ಇಂದು ಬರುತ್ತಿರುವ ಅನುದಾನಕ್ಕೆ ಸಂವಿಧಾನದ ಆಶಯವೇ ಕಾರಣವಾಗಿದೆ. ಗ್ರಾಮೀಣ ಭಾಗದವರ ಸಂಕಷ್ಟವನ್ನು ಅರಿತಿದ್ದ ಡಾ. ಅಂಬೇಡ್ಕರ್‌ರವರು ರೈತರು ಸೇರಿದಂತೆ ಒಟ್ಟಾರೆ ಗ್ರಾಮೀಣ ಭಾರತದ ಅಭಿವೃದ್ಧಿಗೆ ಚೌಕಟ್ಟು ನೀಡಿದ್ದಾರೆಂದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮ ಪಂಚಾಯ್ತಿ ಸದಸ್ಯೆ ರೇಖಾ ಮಾತನಾಡಿ, ಸಂವಿಧಾನದ ಆಶಯದಂತೆ ದಲಿತರು, ಧಾರ್ಮಿಕ ಅಲ್ಪಸಂಖ್ಯಾತರು, ಮಹಿಳೆಯರಿಗೆ ಹತ್ತಾರು ಯೋಜನೆಗಳನ್ನು ಸರ್ಕಾರ ಜಾರಿ ಮಾಡಿದೆ. ಆಯಾ ಇಲಾಖಾಧಿಕಾರಿಗಳಲ್ಲಿ ವಿಚಾರಿಸಿ, ಸೌಲಭ್ಯಗಳನ್ನು ಪಡೆದುಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯ್ತಿ ಉಪಾಧ್ಯಕ್ಷೆ ಲಕ್ಷ್ಮಿದೇವಿ ಮಂಜಪ್ಪ, ಸದಸ್ಯರಾದ ಹೆಚ್.ಎಂ.ಹನುಮಂತಪ್ಪ, ಪರಶುರಾಮ್, ಹೊಸಪಾಳ್ಯ ಯುವರಾಜ್, ಮಲ್ಲನಾಯ್ಕನಹಳ್ಳಿ ಗುಡದಪ್ಪ, ಚೌಡಪ್ಪ ಸಿ. ಭಾನುವಳ್ಳಿ, ಕೆ.ಎನ್. ಹಳ್ಳಿ ಹನುಮಂತಪ್ಪ, ದೇವರಾಜಪ್ಪ, ಭರಮಪ್ಪ, ರವಿರಾಜು, ಪ್ರವೀಣ್, ಹಾಲೇಶ್, ಪ್ರತಾಪ್, ರಾಮಪ್ಪ, ಭರಮಪ್ಪ, ಪೂಜಾ, ನಿರ್ಮಲ, ಲತಾ, ತಾರಾ ಹಾಗೂ ಇತರರಿದ್ದರು.

## ತಹಶೀಲ್ದಾರರ ಮೇಲೆ ಹಲ್ಲೆ: ಸೂಕ್ತ ಕ್ರಮಕ್ಕೆ ಒತ್ತಾಯ



### ರಾಣೇಬೆನ್ನೂರು

ರಾಣೇಬೆನ್ನೂರು, ಜ.29- ಬೀದರ್ ಜಿಲ್ಲೆ ಹುಮ್ನಾಬಾದ್ ತಹಶೀಲ್ದಾರ್ ಡಾ.ಪ್ರದೀಪ ಹಿರೇಮಠ ಅವರ ಮೇಲೆ ಹಲ್ಲೆ ಮಾಡಿದ ಬಿಎಸ್‌ಪಿ ಮುಖಂಡರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಿ ಶಿಕ್ಷೆಗೆ ಒಳಪಡಿಸುವಂತೆ ರಾಣೇಬೆನ್ನೂರು ತಾಲ್ಲೂಕು ಸರ್ಕಾರಿ ನೌಕರರ ಸಂಘ ಒತ್ತಾಯಿಸಿದೆ.

ಸಂಘದ ಪದಾಧಿಕಾರಿಗಳಾದ ಎಂ.ಡಿ. ದ್ಯಾಮಣ್ಣನವರ, ಶಂಭು ಷಡಾಕ್ಷರಿಮಠ, ಅರುಣಕುಮಾರ ಚಂದನ, ಪ್ರಿಯಾ, ಅಕ್ಷತಾ, ಸಂತೋಷ, ಅವರು ಇಲ್ಲಿನ ತಹಶೀಲ್ದಾರ್ ರಿಗೆ ಮನವಿ ಸಲ್ಲಿಸಿದರು.

# ಕುರಿಗಳಿಗೆ ಕಾಲ ಕಾಲಕ್ಕೆ ಲಸಿಕೆ ಹಾಕಿಸಿ

### ರಾಣೇಬೆನ್ನೂರು: ಡಾ.ಪರಮೇಶ್ ಎನ್.ಹುಬ್ಬಳ್ಳಿ ಸಲಹೆ



ರಾಣೆಬೆನ್ನೂರು, ಜ. 29- ಕುರಿ ಮತ್ತು ಮೇಕೆಗಳಿಗೆ ಕಾಲ ಕಾಲಕ್ಕೆ ಜಂತು ನಾಶಕ ಹಾಗೂ ಲಸಿಕೆಗಳನ್ನು ಹಾಕಿಸುವಂತೆ ಸಹಾಯಕ ನಿರ್ದೇಶಕ ಡಾ.ಪರಮೇಶ್ ಎನ್.ಹುಬ್ಬಳ್ಳಿ ಕುರಿಗಾರರಿಗೆ ಕರೆ ನೀಡಿದರು.

ನಗರದ ಪಶು ಆಸ್ಪತ್ರೆಯಲ್ಲಿ ಗುರುವಾರ ಜಂತುನಾಶಕ ವಿತರಿಸಿ ಮಾತನಾಡಿದ ಅವರು, ಕುರಿ-ಮೇಕೆಗಳಲ್ಲಿ ಅನಾರೋಗ್ಯ ಕಂಡು ಬಂದರೆ ತಕ್ಷಣ ಪಶುವೈದ್ಯಕೀಯ ಸಂಸ್ಥೆಯನ್ನು ಸಂಪರ್ಕಿಸಬೇಕು. ಇಲಾಖೆಯಿಂದ ಅಗತ್ಯ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಮುಖ್ಯ ಪಶುವೈದ್ಯಾಧಿಕಾರಿಗಳಾದ ಡಾ.ಸಿ.ಯು. ಗೋಣೆಪ್ಪನವರ, ಡಾ.ದಿವಾಕರ ನಾಡಿಗೇರ, ಕುರಿಗಾರರ ಸಂಘದ ಅಧ್ಯಕ್ಷ ನೀಲಪ್ಪ ದೇವರಗುಡ್ಡ, ಪಶುವೈದ್ಯ ಪರೀಕ್ಷಕರಾದ ರವಿ ನಾಯಕ, ರಾಜು ರಾಣೇಬೆನ್ನೂರು, ಕುರಿಗಾರರಾದ ಭೀಮಪ್ಪ ಬಾಗಲವರ, ಬೀರಪ್ಪ ಮೆಡ್ಲೇರಿ, ಚಿಕ್ಕಪ್ಪ ಬಾಗಲವರ, ಸುಭಾಷ್ ಬಾಗಲವರ, ಹೊನ್ನಪ್ಪ ದೇವರಗುಡ್ಡ, ಮರಡೆಪ್ಪ ಮಾಳಗೇರ, ದಿಳ್ಳೆಪ್ಪ ಗುಡಗೂರ, ಮಂಜುನಾಥ ಬಸನಗೌಡ್ರ ಇತರರು ಹಾಜರಿದ್ದರು.

## ತಹಶೀಲ್ದಾರ್ ಮೇಲಿನ ಹಲ್ಲೆ ಖಂಡನೀಯ

ದಾವಣಗೆರೆ, ಜ.29- ಹುಮನಾಬಾದ್ ತಾಲ್ಲೂಕಿನ ಕರ್ತವ್ಯ ನಿರತ ತಹಶೀಲ್ದಾರ್ ಡಾ. ಪ್ರದೀಪ್ ಹಿರೇಮಠ್ ಅವರ ಮೇಲಿನ ಹಲ್ಲೆಯನ್ನು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆ ಖಂಡಿಸಿದೆ.

ಈ ಕುರಿತು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ, ಕರ್ತವ್ಯದ ವೇಳೆ ದಿಢೀರನೇ ಬಂದು ಅವಾಚ್ಯ ಶಬ್ಧಗಳಿಂದ ನಿಂದಿಸಿ, ದೈಹಿಕ ಹಲ್ಲೆ ನಡೆಸಿ, ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾರೆ. ತಪ್ಪಿತಸ್ಥರನ್ನು ಕೂಡಲೇ ಬಂಧಿಸಿ, ನಿರ್ದಾಕ್ಷಿಣ್ಯ ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

ರಾಜ್ಯದಲ್ಲಿ 8 ಲಕ್ಷಕ್ಕೂ ಅಧಿಕ ಸರ್ಕಾರಿ ಹುದ್ದೆಗಳಿದ್ದರೂ, ಕೇವಲ 5 ಲಕ್ಷ 40 ಸಾವಿರ ನೌಕರರು ಮಾತ್ರ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇನ್ನೂ 2 ಲಕ್ಷಕ್ಕೂ ಅಧಿಕ ಹುದ್ದೆಗಳು ಖಾಲಿ ಇವೆ. ಕೂಡಲೇ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಿ ಒತ್ತಡ ಕಡಿಮೆ ಮಾಡಿದರೆ ನೌಕರರು ಇನ್ನಷ್ಟು ಉತ್ತಮವಾಗಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಪದಾಧಿಕಾರಿಗಳಾದ ಸಿ. ಗುರುಮೂರ್ತಿ, ಡಾ. ಎಸ್. ರಂಗನಾಥ್, ಉಮೇಶ್, ಶಕೀಲ್ ಅಹ್ಮದ್, ವಿವೇಕಾನಂದ ಮತ್ತಿತರರು ಉಪಸ್ಥಿತರಿದ್ದರು.

# ದೇವರಬೆಳಕೆರೆಯಲ್ಲಿ ಮಕ್ಕಳಿಗೆ ನೋಟ್ ಬುಕ್ ವಿತರಣೆ



ಮಲೇಬೆನ್ನೂರು, ಜ.29- ಹರಿಹರ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆಯವರು ಬೆಂಗಳೂರಿನ ಮಾರುತಿ ಮೆಡಿಕಲ್ಸ್‌ನ ಮಹೇಂದ್ರ ಮುಣೋತ್‌ರವರ ಮನವೊಲಿಸಿ, ದೇವರಬೆಳಕೆರೆ, ಕುಂಬಳೂರು, ಕೊಕ್ಕನೂರು, ಜಿಟಿ ಕಟ್ಟೆ, ಕೆ.ಎನ್‌ಹಳ್ಳಿ, ಗುಳದಹಳ್ಳಿ, ಆದಾಪುರ, ಉಕ್ಕಡಗಾತ್ರಿ, ಹಳ್ಳಿಹಾಳು, ಮಲೇಬೆನ್ನೂರು ಪಟ್ಟಣದ ಪ್ರೌಢಶಾಲೆ ಮತ್ತು ವಿವಿಧ ಪ್ರಾಥಮಿಕ ಶಾಲೆಗಳ ಮಕ್ಕಳಿಗೆ 50 ಸಾವಿರ ನೋಟ್ ಬುಕ್‌ಗಳನ್ನು ಹಂಚಿಕೆ ಮಾಡಿ ಮಾದರಿಯಾಗಿದ್ದಾರೆ ಎಂದು ತಹಸೀಲ್ದಾರ್ ಕೆ.ಬಿ.ರಾಮಚಂದ್ರಪ್ಪ ಮೆಚ್ಚುಗೆ ವ್ಯಕ್ತಪಡಿಸಿದರು.

ದೇವರಬೆಳಕೆರೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ವಿತರಿಸಿ ಅವರು ಮಾತನಾಡಿದರು.

ತಾ.ಪಂ ಇಒ ಗಂಗಾಧರನ್ ಮಾತನಾಡಿ, ಸರ್ಕಾರಿ ಶಾಲೆಯೆಂದರೆ ದೇವಾಲಯವಿದ್ದಂತೆ. ಆ ಶಾಲೆಯು ಪ್ರಕೃತಿಯ ಪಾಠವನ್ನು ಕಲಿಸುತ್ತದೆ.ಒಡನಾಟದ, ಚಿತ್ರದ ಮೂಲಕವೇ ಪಾಠ ಕಲಿಯಬೇಕಾಗುತ್ತದೆ. ಇಂದು ಉನ್ನತ ಅಧಿಕಾರಿಯಾದವರು ಸರ್ಕಾರಿ ಶಾಲೆಯಲ್ಲಿಯೇ ಓದನ್ನು ಕಲಿತವರಾಗಿದ್ದಾರೆ ಎಂದರು.

ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್‌ಕುಮಾರ್ ಹೆಗಡೆ, ಸಿಆರ್‌ಪಿ ಸತೀಶ್, ಶಿಕ್ಷಕರಾದ ಚಂದ್ರಕಲಾ, ಲೀಲಾವತಿ, ಎಸ್‌ಡಿಎಂಸಿ ಅಧ್ಯಕ್ಷ ಕೊಟ್ರೇಶ್, ಉಪಾಧ್ಯಕ್ಷ ಮಂಜಪ್ಪ, ಪದಾಧಿಕಾರಿ ಜಯಶೀಲಾ, ರಮೇಶ್, ನಾಗರತ್ನ, ಲಲಿತಾ, ಸುರೇಶ್ ಮಠದ್ ಮತ್ತಿತರರು ಈ ವೇಳೆ ಹಾಜರಿದ್ದರು.

## ಸಿರಿಕನ್ನಡ ವಾಹಿನಿಯಲ್ಲಿ 'ಮಹಾಪುರಾಣ'

ದಾವಣಗೆರೆ, ಜ.29- ಸಿರಿಕನ್ನಡ ವಾಹಿನಿಯು ನಾಡಿದ್ದು ದಿನಾಂಕ 31 ರ ಸೋಮವಾರದಿಂದ ಶುಕ್ರವಾರದವರೆಗೆ ಹೊಚ್ಚ ಹೊಸ ಪೌರಾಣಿಕ ಮಹಾನ್ ದೃಶ್ಯ ಕಾವ್ಯ 'ಮಹಾಪುರಾಣ' ವನ್ನು ಪ್ರಥಮ ಬಾರಿಗೆ ತರುತ್ತಿದೆ.

ರಾಮಾಯಣ, ಮಹಾಭಾರತದಂತೆ 'ಮಹಾಪುರಾಣ'ದ ಸಂಚಿಕೆಗಳು ಹಲವಾರು ವಿಶೇಷತೆಗಳೊಂದಿಗೆ ಕನ್ನಡದಲ್ಲೇ ಮೂಡಿ ಬರುತ್ತಿರುವುದು ಈ ಧಾರಾವಾಹಿಯ ವಿಶೇಷತೆಗಳಲ್ಲೊಂದು ಎಂದು ಸಂಸ್ಥಾಪಕ ನಿರ್ದೇಶಕ ಸಂಜಯ್ ಶಿಂಧೆ, ವಾಹಿನಿಯ ಮುಖ್ಯಸ್ಥ ರಾಜೇಶ್ ರಾಜಘಟ್ಟ ತಿಳಿಸಿದ್ದಾರೆ.

## ನ್ಯಾ. ಗೌಡರ ವಜಾಕ್ಕೆ ಆಗ್ರಹ

ದಾವಣಗೆರೆ, ಜ. 29- ಡಾ.ಬಿ.ಆರ್. ಅಂಬೇಡ್ಕರ್ ಅವರ ಭಾವ ಚಿತ್ರವನ್ನು ತೆಗೆಸಿ ಧ್ವಜಾರೋಹಣ ನೆರವೇರಿಸಿದ ರಾಯಚೂರು ಜಿಲ್ಲಾ ನ್ಯಾಯಾಧೀಶರಾದ ಮಲ್ಲಿಕಾರ್ಜುನ ಗೌಡರವರನ್ನು ಈ ತಕ್ಷಣ ವಜಾಗೊಳಿಸುವಂತೆ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಗಳು ಮತ್ತು ರಾಜ್ಯ ಸರ್ಕಾರವನ್ನು ಕೆಪಿಸಿಸಿ ವಕ್ತಾರ ಡಿ. ಬಸವರಾಜ್ ಆಗ್ರಹಿಸಿದ್ದಾರೆ.

### ನಿವೃತ್ತ ಶಿಕ್ಷಕ ಎ.ಡಿ. ಶರಣಪ್ಪ ನಿಧನ



ಹೊಸ ಕುಂದವಾಡ ಗ್ರಾಮದ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕ **ಎ.ಡಿ. ಶರಣಪ್ಪ** ಅವರು, ದಿನಾಂಕ 29.1.2022 ರ ಶನಿವಾರ ರಾತ್ರಿ 9.15 ಕ್ಕೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಪತ್ನಿ ಜಯಮ್ಮ, ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧುಗಳು ಹಾಗೂ ಹೊಸ ಕುಂದವಾಡ ಗ್ರಾಮದ ಅಪಾರ ಶಿಷ್ಯ ವೃಂದವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.1.2022 ರ ಭಾನುವಾರ ಮಧ್ಯಾಹ್ನ 12.30 ಕ್ಕೆ ಹಳೇ ಕುಂದವಾಡ ಗ್ರಾಮದ ರುದ್ರಭೂಮಿಯಲ್ಲಿ ನೆರವೇರಲಿದೆ.

**95386 36892, 91481 27730**

## 'ಆಶ್ರಯ'ಕ್ಕೆ ನಿರಾಶ್ರಿತರಿಂದ ಅರ್ಜಿ ಅಹ್ವಾನ

ದಾವಣಗೆರೆ, ಜ.29- 'ಆಶ್ರಯ' ಹಿರಿಯ ವನಿತೆಯರ ಆನಂದ ಧಾಮವು ನಿರಾಶ್ರಿತ ಮಹಿಳೆಯರು, ವಿಧವೆಯರು, ಅವಿವಾಹಿತರು, ಮಕ್ಕಳು ಇದ್ದೂ ಅವರನ್ನು ನೋಡಿಕೊಳ್ಳದವರು, ಅನಾಥರು ಮತ್ತು ಅಬಲೆಯರಿಗೆ ಆಸರೆ ನೀಡು ತ್ತಿದೆ. ಸಂಪರ್ಕಿಸಿ : 94806 87273,98448 50414,98451 66724.

### ಹೆಚ್. ಕಲಪನಹಳ್ಳಿ ಶಾರದಮ್ಮ ನಿಧನ



ದಾವಣಗೆರೆ ತಾಲ್ಲೂಕು ಹೆಚ್.ಕಲಪನಹಳ್ಳಿ ಗ್ರಾಮದ ವಾಸಿ ನಿಟುವಳ್ಳಿ ದಿ|| **ಕೆ.ಜಿ. ಮುರಿಗೇಂದ್ರಪ್ಪನವರ ಪತ್ನಿ ಶಾರದಮ್ಮ (70)** ಇವರು, ದಿನಾಂಕ 29.01.2022 ರ ಶನಿವಾರ ರಾತ್ರಿ 9.50 ಕ್ಕೆ ನಿಧನರಾದರು. ನಾಲ್ವರು ಪುತ್ರರು, ಓರ್ವ ಪುತ್ರಿ, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 30.01.2022 ರ ಭಾನುವಾರ ಮಧ್ಯಾಹ್ನ 2.30 ಕ್ಕೆ ಹೆಚ್.ಕಲಪನಹಳ್ಳಿ ಗ್ರಾಮದಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬವರ್ಗ. ಮೊ: 95388-90578**

## ಡಿಸಿಎಂ ಬಡಾವಣೆಯಲ್ಲಿ ಸ್ವಚ್ಛತಾ ಕಾರ್ಯಕ್ರಮ

ದಾವಣಗೆರೆ, ಜ.29- ಡಿಸಿಎಂ ಟೌನಶಿಪ್ ನಾಗರಿಕರ ಸಂಘದಿಂದ ನಾಗರಿಕರ ಸಹಕಾರದೊಂದಿಗೆ ಸ್ವಚ್ಛತಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಸಂಘದ ಅಧ್ಯಕ್ಷ ಎ.ಆರ್. ತಿರುಮಲೆ, ಗೌರವಾಧ್ಯಕ್ಷ ಟಿ. ಮೂಡಲಗಿರಿಯಪ್ಪ, ಸಾಂಬೋಜಿರಾವ್, ಆರ್. ವಿಜಯಕುಮಾರ್, ಗೋವಿಂದ ರೆಡ್ಡಿ, ಎಸ್. ಶಿವನಪ್ಪ, ಬಸವರಾಜ್ ಹುಂಡೇಕರ್, ಕೆ. ನಾಗರಾಜ್, ಕೆ.ಹೆಚ್. ಮುಂಜುನಾಥ ರೆಡ್ಡಿ, ಹೆಲ್ತ್ ಇನ್ಸ್‌ಪೆಕ್ಟರ್ ರಾಘವೇಂದ್ರ, ದಫೇದಾರ್ ಕಾಂತರಾಜ್ ಪಾಲ್ಗೊಂಡಿದ್ದರು.

## ನ್ಯಾಯಾಧೀಶ ಮಲ್ಲಿಕಾರ್ಜುನ ವಜಾಕ್ಕೆ ದಸಂಸ ಒತ್ತಾಯ

ದಾವಣಗೆರೆ, ಜ.29- ಗಣರಾಜ್ಯೋತ್ಸವದಂದು ಅಂಬೇಡ್ಕರ್ ಭಾವಚಿತ್ರ ತೆಗೆಸಿ ಅಪಮಾನಗೊಳಿಸಿದ ನ್ಯಾಯಾಧೀಶ ಮಲ್ಲಿಕಾರ್ಜುನ ಗೌಡ ಅವರನ್ನು ಸೇವೆಯಿಂದ ವಜಾಗೊಳಿಸಬೇಕು. ತಕ್ಷಣ ಕ್ರಮ ಕೈಗೊಳ್ಳದಿದ್ದರೆ ಕರ್ನಾಟಕ ಬಂದ್‌ಗೆ ಕರೆ ಕೊಡುವುದಾಗಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಮಹಾತ್ಮ ಪ್ರೊ. ಬಿ. ಕೃಷ್ಣಪ್ಪ ಸ್ಥಾಪಿತ ) ರಾಜ್ಯ ಸಂಚಾಲಕ ಹೆಣ್ಣೂರು ಶ್ರೀನಿವಾಸ್ ಪತ್ರಿಕಾಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

ಡಾ. ಬಿ.ಆರ್. ಅಂಬೇಡ್ಕರ್ ರಚಿಸಿದ ಸಂವಿಧಾನ ವ್ಯವಸ್ಥೆಯಲ್ಲಿ ನ್ಯಾಯಾಧೀಶರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅಂತಹ ಸಂವಿಧಾನ ಶಿಲ್ಪಿಗೆ ಅಪಮಾನ ಮಾಡಿರುವುದು ಖಂಡನೀಯ. ತನ್ನ ತಪ್ಪನ್ನು ಮುಚ್ಚಿ ಹಾಕಲು ಮಾಧ್ಯಮಗಳಲ್ಲಿ ಸ್ಪಷ್ಟನೆ ನೀಡಿರುವುದು ಸರಿಯಲ್ಲ ಎಂದರು. ಪತ್ರಿಕಾಗೋಷ್ಠಿಯಲ್ಲಿ ಟಿ. ರವಿಕುಮಾರ್, ಎಂ. ರವಿ, ಹೆಚ್. ಮಲ್ಲಿಕಾರ್ಜುನ್, ಆರ್. ಪ್ರಭಾಕರ್, ಹೆಚ್. ಆನಂದ್, ರಾಘವೇಂದ್ರ ಕಡೇಮನಿ ಮತ್ತಿತರರಿದ್ದರು

|| ಶ್ರೀ ಕುರುವತ್ತಿ ಬಸವೇಶ್ವರ ಪ್ರಸನ್ನ ||

### ಕೈಲಾಸ ಶಿವಗಣಾರಾಧನೆ ಆಹ್ವಾನ



ದಾವಣಗೆರೆ ತಾಲ್ಲೂಕು ಬಿ. ಕಲಪನಹಳ್ಳಿ ಗ್ರಾಮದ ವಾಸಿಗಳಾದ
**ದಿ|| ಶ್ರೀಮತಿ ಶ್ರೀ ಶಿವರುದ್ರಪ್ಪನವರ ಮಕ್ಕಳು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 23.01.2022ನೇ ಭಾನುವಾರ ಮಧ್ಯಾಹ್ನ 12.30ಕ್ಕೆ ನಮ್ಮ ಪೂಜ್ಯ ತಾಯಿಯವರಾದ
**ಶ್ರೀಮತಿ ಬಸಮ್ಮ ಶಿವರುದ್ರಪ್ಪನವರು**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಶಿವಗಣಾರಾಧನೆ'ಯನ್ನು**
**ದಿನಾಂಕ : 31.01.2022ರ ಸೋಮವಾರ ಬೆಳಿಗ್ಗೆ 11.30ಕ್ಕೆ ಸ್ಥಳ : ಮೃತರ ಸ್ವಗೃಹ, ನ್ಯಾಷನಲ್ ಕಾನ್ವೆಂಟ್ ರೋಡ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ** ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಕುಟುಂಬ ವರ್ಗದವರು ಹಾಗೂ ಬಂಧು-ಮಿತ್ರರು**

ವಿ.ಸೂ. : ಇದನ್ನೇ ವೈಯಕ್ತಿಕ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

### ಭಾವಪೂರ್ಣ ಶ್ರದ್ಧಾಂಜಲಿ



ದಿ. 28.1.2022ರಂದು ನಿಧನರಾದ ದೈವಜ್ಞ ಬ್ರಾಹ್ಮಣ ಮಹಿಳಾ ಮಂಡಳಿಯ ನಿರ್ದೇಶಕರಾದ
**ಶ್ರೀಮತಿ ಸುನೀತ ಚಂದ್ರಕಾಂತ್ ರೇವಣಕರ್**
ಅವರಿಗೆ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥನೆ.

ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ
**ದೈವಜ್ಞ ಬ್ರಾಹ್ಮಣ ಮಹಿಳಾ ಮಂಡಳಿ, ದಾವಣಗೆರೆ.**

### ಭಾರತ್ ಕಾಲೋನಿಯ ರುದ್ರಮ್ಮ ನಿಧನ



ದಾವಣಗೆರೆ ಭಾರತ್ ಕಾಲೋನಿ 1ನೇ ಮೇನ್ 4ನೇ ಕ್ರಾಸ್ ದಿ. ಈಚಘಟ್ಟ ಮಠದ ಕೆ. ವೀರಭದ್ರಯ್ಯ ಇವರ ಪತ್ನಿ ಶ್ರೀಮತಿ ರುದ್ರಮ್ಮ (79) ಇವರು ದಿನಾಂಕ 29.1.2022 ರ ಶನಿವಾರ ರಾತ್ರಿ 7.35 ಕ್ಕೆ ನಿಧನರಾದರು. ಮೂವರು ಪುತ್ರರು, ಮೂವರು ಪುತ್ರಿಯರು, ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕರಿಲಕ್ಕೇನಹಳ್ಳಿ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.1.2022 ರ ಭಾನುವಾರ ಮಧ್ಯಾಹ್ನ 12.30 ಕ್ಕೆ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ.

# ಹರಿಹರ : ತಹಶೀಲ್ದಾರ್ ಮೇಲೆ ಹಲ್ಲೆ ಕಾನೂನು ಕ್ರಮಕ್ಕೆ ನೌಕರರ ಪ್ರತಿಭಟನೆ



ಹರಿಹರ, ಜ.29 - ಹುಮನಾಬಾದ್ ತಾಲ್ಲೂಕಿನ ತಹಶೀಲ್ದಾರ್ ಡಾ. ಪ್ರದೀಪ್ ಹಿರೇಮಠ ಅವರ ಮೇಲೆ ಹಲ್ಲೆ ಮಾಡಿರುವ ವ್ಯಕ್ತಿಗಳನ್ನು ಬಂಧಿಸಿ ಕಾನೂನಾತ್ಮಕ ಕ್ರಮ ಜರುಗಿಸಬೇಕು ಎಂದು ಹರಿಹರ ತಾಲ್ಲೂಕು ಸರ್ಕಾರಿ ನೌಕರರು, ಪ್ರತಿಭಟನೆ ಮಾಡಿ ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಅವರಿಗೆ ಮನವಿ ಪತ್ರ ಸಲ್ಲಿಸಿದ್ದಾರೆ.

ಈ ವೇಳೆ ಹರಿಹರ ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ಮಾತನಾಡಿ, ಸರ್ಕಾರಿ ನೌಕರರ ಮೇಲೆ ಈ ರೀತಿಯ ದೌರ್ಜನ್ಯ ಮತ್ತು ಹಲ್ಲೆಗಳು ಪದೇ ಪದೇ ನಡೆಯುತ್ತಿವೆ. ಇದರಿಂದಾಗಿ ಅಧಿಕಾರಿ ಮತ್ತು ಸಿಬ್ಬಂದಿಗಳು ಆತಂಕ ಮತ್ತು ಭಯದಿಂದ ಕರ್ತವ್ಯ ನಿರ್ವಹಣೆ ಮಾಡುವ ವಾತಾವರಣ ಸೃಷಿಯಾಗುತ್ತಿದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯದರ್ಶಿ ಡಿ.ಟಿ. ಮಂಜುನಾಥ್, ಖಜಾಂಚಿ ಕೆ. ಶಿವಮೂರ್ತಿ, ರಾಜ್ಯ ಪರಿಷತ್ ಸದಸ್ಯ ವಿಜಯ ಮಹಾಂತೇಶ್, ಎ.ಕೆ. ಭೂಮೇಶ್, ಎಂ ಉಮ್ಮಣ್ಣ, ಲೋಹಿತ್ ಕೊಂಡಜ್ಜಿ, ಆನಂದ್, ಶಿವಕುಮಾರ್, ಶಶಿಧರ್, ಉಮೇಶ್, ನಾಗರಾಜ್, ಜಗದೀಶ್, ಬಸವರಾಜ್, ಪ್ರಭು, ಕಿರಣ್, ವಿಜಯಪ್ರಕಾಶ್, ಭಾಗೀರಥಿ, ನರಸಮ್ಮ, ಸಂಗೀತ ಜೋಷಿ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಲೋಕತಾರಕರಿಬ್ಬರ ಸಾಮ್ಯತೆ (ನಿಜದ)ಯ ಚರಮ (ಎಲೆಜಿ) ಯಾತ್ರೆ


ನ್ಯಾಯಪರತೆ ಮತ್ತು ಸ್ವಾತಂತ್ರ್ಯದ ಪ್ರಗಲ್ಭತೆಯನ್ನು ಎತ್ತಿ ಹಿಡಿಯುವ ಜೀವಂತ ಜನತೆ ಇರುವ ತನಕ ಗಾಂಧಿ ಮಹಾತ್ಮ ಮತ್ತು ಮಾರ್ಟಿನ್ ಲೂಥರ್ ಕಿಂಗ್‌ರ ಹೆಸರು ನಿತ್ಯ ಸ್ಮರಣೆಯಲ್ಲಿ ಕಂಗೊಳಿಸುತ್ತವೆ. ಇಂತಹ ಪುಣ್ಯ ಪುರುಷರು ಜಾತ್ಯರಾಗುವುದು ವಿಶ್ವಕ್ಕೆ; ವಿಶ್ವ ಜನಾಂಗಕ್ಕೆ ಮಹಾನ್ ಪುಣ್ಯವೆಂದು ಹೇಳಬೇಕಾಗುತ್ತದೆ. ಋಜುತ್ವ ಮತ್ತು ನಿಷ್ಪಕ್ಷಪಾತ ಭಾಗ್ಯದಾತರಿಗೆ ಕಾಲ ಉರುಳಿದಂತೆ ಜನಸಮೂಹ ಭಕ್ತಿ, ಗೌರವಗಳನ್ನು ಅರ್ಪಿಸುತ್ತದೆ.

ಈ ಮಹಾತ್ಮರು ಮನುಷ್ಯ ಮಾತ್ರರಿಗೆ ಅಸಾಧ್ಯವಾ ದುದನ್ನು ಭಾರತ ಮತ್ತು ಅಮೇರಿಕಕ್ಕೆ ಮಾತ್ರವಲ್ಲದೇ, ವಿಶ್ವ ಜನಾಂಗಕ್ಕೇ ಸೇವಾ ಜ್ಯೋತಿಯ ಮೂಲಕ ಮಾಡಿ ತೋರಿ ಚಿನ್ಮಾನಿಗಳಾಗಿ ಮೃತ್ಕಲಾಶಕ್ತಿಯಿಂದ ಸತ್ಕಲಾ ಪ್ರೇಮಿಗಳಾಗಿದ್ದಾರೆ; ಶಾಶ್ವತ ಸುಶಾಂತಿಯ ಸಂಸ್ಥಾಪಕರಾಗಿದ್ದಾರೆ; ವಿಶ್ವಘಾತುಕ ರಾಕ್ಷಸಿ ಶಕ್ತಿಯನ್ನು ಧ್ವಂಸ ಮಾಡಿದ್ದಾರೆ; ಭೌತ ಭೋಗ ವಸ್ತುಗಳನ್ನು ತ್ಯಜಿಸಿದ್ದಾರೆ; ಸಾವನ್ನು ಸ್ವಾಗತಿಸಿ, ಶರೀರವನ್ನು ವರ್ಜಿಸುವ ದೃಢ ಮನೋಭಾವವನ್ನು ಹೊಂದಿದವರಾಗಿದ್ದಾರೆ. ಯುಗ ಪುರುಷರಿಗೆ ಸಾವಿಲ್ಲ, ಅವರು ಗೈದ ಕಾರ್ಯಗಳು ಚಿರನೂತನವಾಗಿರುತ್ತವೆ. ಅಂತೆಯೇ ಇವರಿಬ್ಬರು ನಮ್ಮ ಮಧ್ಯ ಇಲ್ಲದಿದ್ದರೂ, ಅವರ ಕೆಲಸ, ಕಾರ್ಯಗಳು ಮಾನವ ಜನಾಂಗಕ್ಕೆ ಮಾಡಿದ ಅನಂತ ತ್ಯಾಗಗಳು. ನಿತ್ಯ ಜೀವನದಲ್ಲಿ ಸಾಮಾನ್ಯ-ಅಸಾಮಾನ್ಯರ ಸ್ಮೃತಿ ಪಟಲದಲ್ಲಿ ಹೊಳೆದುಳಿಯುವಲ್ಲಿ ಅನುಮಾನವಿರದು.

ಪ್ರಸ್ತುತ ಲೇಖನದಲ್ಲಿ ಗಾಂಧೀಜಿಯ ಜನ್ಮ ಶತಮಾನೋತ್ಸವದ ಸಂದರ್ಭ ದಲ್ಲಿಯೇ ಸಂಭವಿಸಿದ ಡಾ. ಕಿಂಗ್‌ರವರ ಕೊಲೆ ಈ ಇಬ್ಬರ ವಿಶ್ವ ನಾಯಕರ ನಡುವೆ ಇರುವ ಸಂಬಂಧವನ್ನು ಕುರಿತಾದದ್ದು.

ಗಾಂಧೀಜಿ ಮತ್ತು ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಇವರಿಬ್ಬರ ಜೀವನದಲ್ಲಿಯೂ ಸ್ಪಷ್ಟವಾದ ಸಾಮ್ಯತೆಗಳಿವೆ. ಇಬ್ಬರೂ ವರ್ಣೀಯರು; ಹುಟ್ಟಿದ್ದು ಮಧ್ಯಮ ವರ್ಗದ ಕುಟುಂಬದ ಲ್ಲಿಯೇ; ಒಳ್ಳೆಯ ವಿದ್ಯಾವಂತರು; ಮದುವೆಯಾಗಿ ನಾಲ್ಕು ಮಂದಿ ಮಕ್ಕಳು (ಗಾಂಧೀಜಿಯವರಿಗೆ ನಾಲ್ಕು ಗಂಡು ಮಕ್ಕಳು, ಕಿಂಗ್ ಅವರಿಗೆ ಎರಡು ಗಂಡು, ಎರಡು ಹೆಣ್ಣು) ಸತ್ಯಾಗ್ರಹ ನಿಜದ ಆಸ್ತಿ, ಯಾವುದೇ ಬಗೆಯ ಸಾರ್ವಜನಿಕ ಅಧಿಕಾರಿಗಳಾಗಿರಲಿಲ್ಲ, ಚುನಾಯಿತ ರಾಜ ನೀತಜ್ಞರನೇಕರಿಗಿಂತ ಅಧಿಕಾರವನ್ನು-ಮೆಚ್ಚುಗೆಯನ್ನು ಸಂಪಾದಿಸಿದವರು, ದೈವದತ್ತವಾದ ಮೋಹಕ ಮುಂದಾಳು ಶಕ್ತಿಯನ್ನು ಪಡೆದವರು. ಸತ್ತಾಗಲೂ, ಬದುಕಿದ್ದಾಗಲೂ ಅತ್ಯಂತ ಶ್ರೇಷ್ಠ ಮಾನವತಾವಾದಿಗಳೆಂದು ಗೌರವಾನ್ವಿತರಾದವರು ಹೋರಾಟದ ನಡುವೆಯೇ ಸಾವನ್ನಪ್ಪಿದವರು.

ತದನಂತರ ಗಾಂಧೀಜಿ ದಶಕಗಳಷ್ಟು ಕಾಲ ಆಫ್ರಿಕಾದಲ್ಲಿಯೇ ಕಳೆದರೂ ಏಷ್ಯನ್ನರಾಗಿದ್ದರು. ಅಮೆರಿಕಕ್ಕೆ ಭೇಟಿ ನೀಡಲೇ ಇಲ್ಲ. ಕಿಂಗ್ ಆಫ್ರಿಕಾದ ಪೂರ್ವಜರನ್ನು ಹೊಂದಿದ್ದ ಅಮೆರಿಕನ್ ಹಾಗೂ ಆಫ್ರಿಕಾ ಭಾರತ ಎರಡಕ್ಕೂ ಭೇಟಿ ನೀಡಿದ್ದರು. ಗಾಂಧೀಜಿ 19ನೇ ಶತಮಾನದ ವ್ಯಕ್ತಿ, ಕಿಂಗ್ 20ನೇ ಶತಮಾನದವರು. 1929ರಲ್ಲಿ ಹುಟ್ಟಿದ ಕಿಂಗ್ ಗಾಂಧೀಜಿಯನ್ನು ಸಂಧಿ ಸಲೂ ಇಲ್ಲ, ಪತ್ರ ವ್ಯವಹಾರ ಮಾಡಲೂ ಇಲ್ಲ. ಗಾಂಧೀಜಿಗೆ ಸಾಯುವ ಸಮಯದಲ್ಲಿ ಕಿಂಗ್ ಇದ್ದಾರೆಯೇ ಎನ್ನುವ ವಿಷಯ ತಿಳಿದಿ ರಲಿಲ್ಲ. ಗಾಂಧಿ, ಹಿಂದೂ ಮತ್ತು ವಕೀಲರಾಗಿ ಹಾಗೂ 78 ವರ್ಷ ಜೀವಿಸಿದ್ದರು. ಕಿಂಗ್ ಕ್ರಿಶ್ಚಿಯನ್ ಮತ್ತು ಪಾದ್ರಿಯಾಗಿ 39 ವರ್ಷ ಜೀವಿಸಿದ್ದರು. ಗಾಂಧೀಜಿ ಬಹುಸಂಖ್ಯಾತ ವರ್ಗದ ನಾಯಕರಾಗಿದ್ದರು. ಉತ್ತರಾಧಿಕಾರಿ ಯನ್ನು ಹೊಂದಿರಲಿಲ್ಲ. ಕಿಂಗ್ ಅಲ್ಪಸಂ ಖ್ಯಾತ ವರ್ಗದ ನಾಯಕರಾಗಿದ್ದು ಉತ್ತರಾಧಿ ಕಾರಿಯನ್ನು ಹೊಂದಿರಲಿಲ್ಲ. ಗಾಂಧೀಜಿಯ ವರನ್ನು ಜಗತ್ತೇ ಪೂಜ್ಯ ಭಾವದಿಂದ ಕಂಡಿತು; ಕಿಂಗ್‌ರವರಿಗೆ ನೋಬಲ್ ಶಾಂತಿ ಪಾರಿತೋಷಕ ದೊರಕಿತು. ಇವರಿಬ್ಬರು ಸತ್ಯದ ಶಕ್ತಿಯನ್ನು ಅಹಿಂಸೆಯ ಮೂಲಕ ಒತ್ತಾಯಿಸಿ ಜಯಶೀಲರನ್ನಾಗಿಸಿರುವ ಸಾಧನವೇ ಸತ್ಯಾಗ್ರಹ ಎಂದು ಎತ್ತಿ ಹಿಡಿದರು. ಇದೇ ಅವರ ಬ್ರಹ್ಮಾಸ್ತ್ರವಾಗಿತ್ತು.




**ಗಾಂಧೀಜಿ ಮತ್ತು ಕಿಂಗ್‌ರವರ ಜೀವನದ ಅಂತಿಮ ಗಂಟೆಗಳು :-** ಕೊಲೆ, ಶೋಕ, ಅಂತ್ಯ ಸಂಸ್ಕಾರಗಳನ್ನು ಬಹುಸ್ಪಷ್ಟವಾಗಿ, ಸವಿವರವಾಗಿ, ನಿಜದ ತಳಹದಿಯ ಮೇಲೆ ದಾಖಲಿಸಲಾಗಿದೆ.

1948ರ ಜನವರಿ 30 ಶುಕ್ರವಾರ ದಂದು ನವದೆಹಲಿಯ ಬಿರ್ಲಾ ಭವನದಲ್ಲಿ ಸಂಜೆ 5.00 ಗಂಟೆಯಾದ ಸ್ವಲ್ಪ ವೇಳೆಗೆ ಗಾಂಧೀಜಿ ಮೃತರಾದರು. ಅದು ಪವಿತ್ರ ವಾದ ಯಮುನಾ ನದಿಯಿಂದ ಹಲವು ಮೈಲುಗಳ ದೂರದಲ್ಲಿತ್ತು. ದೈನಂದಿನ ಪ್ರಾರ್ಥನೆಗಾಗಿ ನಡೆದು ಹೋಗುತ್ತಿದ್ದರು.

ಕಿಂಗ್‌ರವರನ್ನು 1968ರ ಏಪ್ರಿಲ್ 4, ಗುರುವಾರದಂದು ಮೆಂಫಿಸ್‌ನ ಲೋರೇನ್ ಮೊಟೆಲ್‌ನಲ್ಲಿ ಸಂಜೆ 6.00 ಗಂಟೆಯಾದ ಸ್ವಲ್ಪದರಲ್ಲೇ ಗುಂಡಿಟ್ಟು ಕೊಲ್ಲಲಾಯಿತು. ಒಡನೆಯೇ ಸೇಂಟ್ ಜೋಸೆಫ್ ಆಸ್ಪತ್ರೆಗೆ ಸಾಗಿಸಿದರು. ಅಲ್ಲಿ ರಾತ್ರಿ 7.00 ಗಂಟೆಗೆ ಮೃತರಾದರು. ಅದು ಮಿಸಿಸಿಪ್ಪಿ ನದಿಯ ಹತ್ತಿರದಲ್ಲಿತ್ತು. ಗಾಂಧೀಜಿಯ ದೇಹವನ್ನು ಬಿರ್ಲಾ ಭವನದಲ್ಲಿ ಸುಮಾರು 18 ಗಂಟೆಗಳ ಕಾಲ ಇಡಲಾಗಿತ್ತು. ಎರಡು ಮೈಲು ಉದ್ದವಾಗಿದ್ದ ಮೆರವಣಿಗೆ, ಐದೂವರೆ ಮೈಲು ದೂರದ ರಾಜಘಾಟಿಗೆ 4 ಗಂಟೆಗೂ ಹೆಚ್ಚು ಕಾಲ ತೆಗೆದುಕೊಂಡು ಸಾಗಿತು. ಅಲ್ಲಿ ದೇಹಕ್ಕೆ ಸಂಸ್ಕಾರ ಮಾಡಲಾಯಿತು.

ಕಿಂಗ್‌ರವರ ದೇಹವನ್ನು ಅವರ ಸತ್ತ 18 ಗಂಟೆಗಳಿಗೂ ಮುಂಚೆ ಖಾಸಗಿ ವಿಮಾನವೊಂದರಲ್ಲಿ ಜನ್ಮಸ್ಥಳವಾದ ಅಟ್ಲಾಂಟಿಗೆ ಒಯ್ಯಲಾಯಿತು. ಅಲ್ಲಿ ಸ್ಪೆಲ್‌ಮನ್ ಕಾಲೇಜಿನಲ್ಲಿ ಅಂತ್ಯದರ್ಶನಕ್ಕಾಗಿ ಇಡಲಾಯಿತು. ಅವರ ತಂದೆ ಎಬಿನೀಜರ್ ಬ್ಯಾಪ್ಟಿಸ್ಟ್ ಚರ್ಚ್‌ನಲ್ಲಿಯೂ ಇಡಲಾಯಿತು. ಏಪ್ರಿಲ್ 9 ರಂದು ಮೈಲುಗಳ ಉದ್ದವಾಗಿದ್ದ ಅಂತಿಮ ಮೆರವಣಿಗೆ 4 ಮೈಲು ದೂರದ ಮೋರ್ ಹೌಸ್ ಕಾಲೇಜಿನ ಆವರಣಕ್ಕೆ 3 ಗಂಟೆಗಳಿಗೂ ಹೆಚ್ಚು ಕಾಲದಲ್ಲಿ ಸಾಗಿತ್ತು.

ಶಾಂತಿ-ಸತ್ಯ-ಅಹಿಂಸಾವಾದಿಯಾಗಿದ್ದ ಕಿಂಗ್‌ರವರ ದೇಹವನ್ನು ಒಬ್ಬ ರೈತನ ವಾಹನದಲ್ಲಿಟ್ಟು ಎರಡು ಹೇಸರಕತ್ತೆಗಳಿಂದ ಎಳೆಸಲಾಯಿತು. ಅವರ ಸಹವರ್ತಿಗಳು ಯಾವುದೇ ಬಗೆಯ ಮಿಲಿಟರಿಯ ಹೊರ ವೇಷವನ್ನು ಸೇರಿಸಲು ಒಪ್ಪಲಿಲ್ಲ. ಆಮೇಲೆ ಸೌತ್ ವ್ಯೂ ಸಿಮಿಟರಿ (ಸೌತ್ ವ್ಹೀವ್ ಸಿಮೆಂಟರಿ) ಯಲ್ಲಿ ಸಂಸ್ಕಾರ ನಡೆಸಲಾಯಿತು.

ಶಾಂತಿ-ಸತ್ಯ-ಅಹಿಂಸೆಯ ಪ್ರತೀಕವಾಗಿದ್ದ ಗಾಂಧೀಜಿಯ ದೇಹವನ್ನು ಸೈನ್ಯದ ಆಯುಧ ಸಾಗಾಣಿಕೆಯ ಒಂದು ವಾಹದಲ್ಲಿ ಇಟ್ಟು ಭಾರತದ ಭೂ, ನೌಕಾ, ವಾಯುದಳಗಳ 200 ಸೈನಿಕರು ಹಗ್ಗದಿಂದ ಎಳೆದುಕೊಂಡು ಸಾಗಿ ರಾಜ್‌ಘಾಟ್‌ನಲ್ಲಿ ಅಂತ್ಯಸಂಸ್ಕಾರ ಮಾಡಲಾಯಿತು.

ಕಿಂಗ್ ದೇಹ ಅಹಿಂಸಾ ಕ್ರಮದಲ್ಲಿ ಚರಮ ಯಾತ್ರೆಯಾದರೆ, ಅಹಿಂಸಾವಾದಿಯಾದ ಗಾಂಧೀಜಿಯ ಮೃತ ಶರೀರವನ್ನು ಹಿಂಸಾಕ್ರಮ (ಆಯುಧ ಸಾಗಾಣಿಕೆಯ ವಾಹನ)ದಲ್ಲಿ ಸಮಾಧಿ ಲೇಖಿಸಲಾಯಿತು. ಇದೊಂದು ಇಂದಿಗೂ ಅತ್ಯಂತ ಕ್ರೂರವೋ, ವಿಡಂಬನೆಯೋ, ಅಸಂಸ್ಕೃತಿಯೋ ಎನಿಸುತ್ತಿದೆ. ಸತ್ಯ, ಆತ್ಮಶಕ್ತಿ, ಅಹಿಂಸೆ ಮತ್ತು ಧೈರ್ಯಗಳಿಂದ ಕೂಡಿದ ಇವರಿಬ್ಬರ ಅಂತ್ಯ ಸಂಸ್ಕಾರಗಳು ಬಹುಶಃ ಇತಿಹಾಸದಲ್ಲಿ ಯಾವ ವ್ಯಕ್ತಿಗೂ ವಿಶ್ವಾಸಾತ್ಮಕ ಪ್ರಶಂಸೆ, ಗೌರವ, ಪ್ರೀತಿಗಳ ಸ್ವಯಂಪ್ರೇರಿತಮನ್ನಣೆದೊರೆಯಲಿಲ್ಲವೆಂಬುದುದೇ ದೀಪ್ಯ ಮಾನ್ಯವಾದ ಸಂಗತಿ.

ಮೋಹನ್‌ದಾಸ್ ಕರಮಚಂದ್ ಗಾಂಧಿ ಮತ್ತು ಡಾ. ಮಾರ್ಟಿನ್ ಲೂಥರ್ ಕಿಂಗ್ ಜ್ಯೂನಿಯರ್ ಪರಸ್ಪರ ಸೇರಿದರು-ಜೀವಂತದಲ್ಲಲ್ಲ; ಮರಣದಲ್ಲಿ.



**ಪ್ರೊ|| ಬಾತಿ ಬಸವರಾಜ್**
ಶೈಕ್ಷಣಿಕ ಸಲಹೆಗಾರರು,
ದವನ ಕಾಲೇಜು, ದಾವಣಗೆರೆ.
ಮೊಬೈಲ್: 8884527130

## ಪದವಾಣಿ-08

ರಚನೆ : ಮಮತಾ ರಾಧಾಕೃಷ್ಣ
ದಾವಣಗೆರೆ.

| | | | | | | | | |
|---|---|---|---|---|---|---|---|---|
| ■ | ■ | ■ | 1 | | 2 | ■ | ■ | ■ |
| ■ | | ■ | 3 | ■ | | ■ | 4 | ■ |
| | | ■ | | ■ | ■ | ■ | 6 | |
| ■ | 7 | | | ■ | 8 | | | ■ |
| ■ | ■ | ■ | 9 | | | ■ | ■ | ■ |
| ■ | 10 | | | ■ | 11 | | 12 | ■ |
| 13 | | ■ | ■ | ■ | | ■ | 14 | |
| ■ | | ■ | 15 | ■ | | ■ | | ■ |
| ■ | ■ | ■ | 16 | | | ■ | ■ | ■ |

**ಎಡದಿಂದ ಬಲಕ್ಕೆ :**

| | |
|---|---|
| 1) ಹುಲಿ ಹೀಗೆ ಬಂದಿದೆ | 3 |
| 5) ಕಾಡುವ ಗ್ರಹ | 2 |
| 6) ಈತ ಅಭಿನಯಗಾರ | 2 |
| 7) ದೇಶೀಯ ತಳಿ | 3 |
| 8) ವಾದ್ಯ ನುಡಿಸು | 3 |
| 9) ದೇವಸ್ಥಾನ-ಸಮನಾರ್ಥಕ ಪದ | 3 |
| 10) ಮಂತ್ರಗಾರ | 3 |
| 11) 'ಕರ'ದ ಮಧ್ಯೆ ಪ್ರತ್ಯಕ್ಷನಾದ ಭಗವಂತ | 3 |
| 13) ತೊಟ್ಟಿಕ್ಕುತ್ತಿರುವ ಜೇನು | 2 |
| 14) ಪವಿತ್ರವಾಗಿ ಕಾಣುತ್ತಿರುವ ಓಲೆ | 2 |
| 16) ಆಶೀರ್ವಾದ ಮಾಡು | 3 |

**ಮೇಲಿನಿಂದ ಕೆಳಕ್ಕೆ :**

| | |
|---|---|
| 1) ಬನಶಂಕರಿಯನ್ನು ಹೀಗೂ ಕರೆವರು | 6 |
| 2) ಕುಶನ ಸೋದರ | 2 |
| 3) ಗಣಿಯಲ್ಲಿ ಹುಟ್ಟಿದುದು | 3 |
| 4) ಕನಸು ನಿಜವಾಗಿದೆ | 3 |
| 8) 'ಸೊಕ್ಕು ಮುರಿ' ಎಂಬರ್ಥಕ ನುಡಿಗಟ್ಟು | 6 |
| 10) ಮಾನವಂತಳಾದ ಮಹಿಳೆ | 3 |
| 12) ಪಣಕ್ಕಿಟ್ಟ ಐಶ್ವರ್ಯ | 3 |
| 15) ಸೋಜಿಗ ಗುಟ್ಟು | 2 |

(ಉತ್ತರಗಳು ಮುಂದಿನ ವಾರಕ್ಕೆ)

**ಪದವಾಣಿ - 07ರ ಉತ್ತರಗಳು :**

**ಎಡದಿಂದ ಬಲಕ್ಕೆ : 1) ಅಭಾವ 3) ಕಮಲ 5) ಕನ್ನಡ 7) ಕದಪು 9) ಮನೋವಿಜ್ಞಾನ 10) ಕಶೇರು 11) ಸುಗುಣ 12) ಕರಗ 14) ನಯನ.**

**ಮೇಲಿನಿಂದ ಕೆಳಕ್ಕೆ : 1) ಅಭ್ರಕ 2) ವಲಲ 4) ಮನೋವಿಕಾರ 5) ಕಟಕ 6) ಡಮರು 7) ಕನಸು 8) ಪುರಾಣ 12) ಕಥನ 13) ಗಗನ.**

## ಗಿಡಮೂಲಿಕೆ ತೆಂಗು



ತೆಂಗಿನ ಮರವನ್ನು ಕಲ್ಪವೃಕ್ಷವೆಂದು ಹೇಳಲು ಕಾರಣ ಅದರಲ್ಲಿರುವ ಉಪಯುಕ್ತ ಗುಣಗಳು. ಬಹಳ ಹಿಂದಿನ ಕಾಲದಿಂದಲೂ ನಮ್ಮ ಹಿರಿಯರು ತೆಂಗಿನ ಮರದ ಭಾಗಗ ಳನ್ನು ಪ್ರತಿನಿತ್ಯ ಅಡುಗೆಗೆ, ಪೂಜೆಗೆ, ಅಲಂಕಾರಕ್ಕೆ, ಚಪ್ಪರ, ಪೊರಕೆ ಮಾಡಲು, ಮನೆ ಕಟ್ಟಲು ಬಳಸುತ್ತಾ ಬಂದಿದ್ದಾರೆ. ಶ್ರೀಫಲವೆಂದು ಕರೆಯಲ್ಪಡುವ ತೆಂಗಿನಕಾಯಿಯು ಪೂಜೆ, ಪುನಸ್ಕಾರಗಳಿಗೆ, ದೇವಸ್ಥಾನಕ್ಕೆ, ಮದುವೆ, ಮುಂಜಿಗಳಿಗೆ, ಶುಭ ಮತ್ತು ಅಶುಭ ಎರಡೂ ರೀತಿಯ ಧಾರ್ಮಿಕ ಆಚರಣೆಗಳಿಗೆ ತೆಂಗಿನಕಾಯಿ ಬೇಕೇಬೇಕು.

ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ಮಾಡುವ ಪ್ರತೀ ಸಂಸ್ಕಾರಗಳಿಗೂ ಜಾತಿ, ವರ್ಗ, ವರ್ಣ ಭೇದವಿಲ್ಲದೇ ತೆಂಗಿನ ಕಾಯಿಯನ್ನು ಉಪಯೋಗಿಸುತ್ತಾರೆ. ಆದರೆ, ಇತ್ತೀಚೆಗೆ ಅದು ಆರೋಗ್ಯಕ್ಕೆ ಒಳ್ಳೆಯದಲ್ಲ. ಹೃದಯಕ್ಕೆ ತೊಂದರೆಯಾಗುತ್ತದೆ, ಕೊಬ್ಬು ಜಾಸ್ತಿಯಾಗುತ್ತದೆ ಹೀಗೆ ಏನೇನೋ ಹೇಳಿ ತೆಂಗು ಉಪಯೋಗಿಸುವುದನ್ನು ಕಡಿಮೆ ಮಾಡಿದರು. ಕಷ್ಟ ಪಟ್ಟು ತುರಿಯಲಾರದೆ ಹಾಗೆ ಹಬ್ಬಿಸಿದರೋ ? ತೆಂಗನ್ನು ಉಪಯೋಗಿಸದೇ ಅನಾರೋಗ್ಯ ಹೆಚ್ಚಿದಾಗ ಅದರ ಲಾಭ ಪಡೆಯಲು ಆ ರೀತಿ ಹಬ್ಬಿಸಿದರೋ ಅಂತೂ ತೆಂಗಿನ ಬಳಕೆ ಕಡಿಮೆಯಾಗಿದ್ದಂತೂ ಸತ್ಯ. ಆದರೆ, ಮತ್ತೆ ತೆಂಗಿನ ಉಪಯೋಗದ ಬಗ್ಗೆ ಜನರಿಗೆ ಮನವರಿಕೆಯಾಗುತ್ತಿದೆ.

ಆರೋಗ್ಯ ಏರುಪೇರಾದಾಗ, ದೇಹದ ಉಷ್ಣತೆ ಹೆಚ್ಚಾದಾಗ, ಮೂತ್ರಕೋಶದ ತೊಂದರೆಗಳಾದಾಗ ಮೊಟ್ಟ ಮೊದಲ ಔಷಧಿಯಾಗಿ ಹೇಳುವುದು ಎಳನೀರನ್ನೇ. ಅದು ಭೂಮಿ ಮೇಲೆ ದೊರೆಯುವ ಪರಿಶುದ್ಧ ನೀರು. ಈ ಎಳನೀರಲ್ಲಿ ಪೋಷಕ ಪದಾರ್ಥಗಳು ಅಧಿಕವಾಗಿವೆ. ನಾಟಿ ವೈದ್ಯರು ಕೆಲವೊಂದು ಔಷಧಿಗಳನ್ನು ಎಳನೀರಿನ ಜೊತೆ ಕೊಡುತ್ತಾರೆ. ಅವು ಆಗ ಉತ್ತಮ ರೀತಿಯಲ್ಲಿ ಕೆಲಸ ಮಾಡುತ್ತವೆ. ಪ್ರತಿಯೊಬ್ಬರೂ ಎಳನೀರು ಒಳ್ಳೆಯದು ಎಂದು ಹೇಳುವವರೇ...

ಆದರೆ, ಎಷ್ಟು ಜನರು ಇತರೆ ಪಾನೀಯಗಳನ್ನು ಬಿಟ್ಟು ಎಳನೀರು ಸೇವಿಸುತ್ತಾರೆ? ಸೋಡಾ ಮಿಶ್ರಿತ, ಬಣ್ಣದ ನೀರಿನ, ಅನಾರೋಗ್ಯಕರ ಪಾನೀಯಗಳಿಗೆ ನೂರಾರು ರೂ.ಗಳನ್ನು ಹಾಕುತ್ತಾರೆಯೇ ಹೊರತು ಬೀದಿ ಬದಿಯಲ್ಲಿ ಸುಲಭವಾಗಿ ಸಿಗುವ ಎಳನೀರನ್ನು ತೆಗೆದುಕೊಳ್ಳುವುದಿಲ್ಲ, ಬದಲಿಗೆ ಚೌಕಾಸಿ ಮಾಡುತ್ತಾರೆ.

ತೆಂಗಿನ ಎಣ್ಣೆಯ ಔಷಧೀಯ ಉಪಯೋಗವನ್ನು ಕರಾವಳಿಯವರು ಚೆನ್ನಾಗಿ ಬಲ್ಲರು. ತೆಂಗಿನ ಹಾಲು, ಎಣ್ಣೆಗಳು ಚರ್ಮದ ಕಾಂತಿಯನ್ನು ಹೆಚ್ಚಿಸುತ್ತವೆ, ಮೃದುಗೊಳಿಸುತ್ತವೆ. ಪಚನ ಕ್ರಿಯೆಯನ್ನು ಸರಾಗಗೊಳಿಸುತ್ತವೆ. ತೆಂಗಿನ ಹಾಲಿನ ಕಾಫಿ ತುಂಬಾ ರುಚಿಕರವಾಗಿರುತ್ತದೆ. ಫ್ಯಾಟ್, ಕೊಲೆಸ್ಟರಾಲ್ ಎನ್ನುವುದೆಲ್ಲ ತಪ್ಪು. ಚೆನ್ನಾಗಿ ಕೆಲಸ ಮಾಡಿದರೆ ಎಲ್ಲಾ ಕರಗುತ್ತದೆ. ಚಳಿಗಾಲದಲ್ಲಿ ಎಳ್ಳೆಣ್ಣೆ ಅಥವಾ ಹರಳೆಣ್ಣೆ ಜೊತೆ ಕಲೆಸಿ ಹಚ್ಚಿದರೆ ಚರ್ಮ ಒಡೆಯುವುದಿಲ್ಲ. ಕೂದಲು ದಟ್ಟವಾಗಿ, ಕಪ್ಪಾಗಿ ಬೆಳೆಯಲು ಕೊಬ್ಬರಿ ಎಣ್ಣೆ ಸಹಾಯಕವಾಗಿದೆ. ತೆಂಗಿನ ಚಿಪ್ಪನ್ನು ಸುಟ್ಟು ಕರಕಲನ್ನು ಚರ್ಮವ್ಯಾಧಿಗೆ ಬಳಸುತ್ತಾರೆ. ಮೂರು ತಿಂಗಳಿಗೊಮ್ಮೆ ಒಂದೆರಡು ಹನಿ ಶುದ್ಧ ಕೊಬ್ಬರಿ ಎಣ್ಣೆಯನ್ನು ಮೂಗಿನ ಎರಡೂ ಹೊಳ್ಳೆಗಳಿಗೆ, ಹೊಕ್ಕಳಿಗೆ ಹಾಕಿಕೊಳ್ಳುವುದರಿಂದ ದೇಹ ಪರಿಶುದ್ಧವಾಗುತ್ತದೆ.

**- ಮಮತಾ ನಾಗರಾಜ್,**
ಪಾರಂಪರಿಕ ವೈದ್ಯೆ, ದಾವಣಗೆರೆ.

## ಅಕ್ರಮ ಬ್ರಾಂದಿ ಮಾರಾಟ ತಡೆಗೆ ಆಗ್ರಹ

**(1ನೇ ಪುಟದಿಂದ)** ಆಗಿದ್ದರೂ ಆರೋಪಿಗಳನ್ನು ದಸ್ತಗಿರಿ ಮಾಡುತ್ತಿಲ್ಲವೆಂದರು. ಶ್ರೀನಿವಾಸ್, ಹೂವಿನ ಮಡು ಚೆನ್ನಬಸಪ್ಪ, ಹರೀಶ್ ನ್ಯಾಮತಿ, ಚಂದ್ರಪ್ಪ, ಹೆಗ್ಗೆರೆ ರಂಗಪ್ಪ, ಚೇತನ್ ಕುಮಾರ್, ಗೋಗೇಶ್, ಜಯಣ್ಣ ಇತರರು ಮಾತನಾಡಿದರು.

ಎಸ್ಪಿ ಸಿ.ಬಿ.ರಿಷ್ಯಂತ್ ಮಾತನಾಡಿ, ದೇವಸ್ಥಾನಗಳಲ್ಲಿ ಪ್ರವೇಶ ನಿರಾಕರಣೆ, ಕಟಿಂಗ್ ಶಾಪ್‌ಗಳಲ್ಲಿ ಕಟಿಂಗ್ ಮಾಡಲು ನಿರಾಕರಿಸಿದರೆ ತಕ್ಷಣ ಸಮೀಪದ ಠಾಣೆಗೆ ದೂರು ನೀಡಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದರು.

ಉಪವಿಭಾಧಿಗಾಕಾರಿ ಮಮತ ಹೊಸಗೌಡರ್, ಅಬಕಾರಿ ಡಿ.ಸಿ. ಶಿವಪ್ರಸಾದ್, ಜಿ.ಪಂ. ಉಪಕಾರ್ಯದರ್ಶಿ ಆನಂದ್, ಮಹಾನಗರ ಪಾಲಿಕೆ ಆಯುಕ್ತ ವಿಶ್ವನಾಥ್ ಮುದಜ್ಜಿ ಉಪಸ್ಥಿತರಿದ್ದರು.

## ಚುನಾವಣಾ ನಿಷೇಧಕ್ಕೆ ಸುಪ್ರೀಂ ವಿಚಾರಣೆ

**(1ನೇ ಪುಟದಿಂದ)** ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದರು.

2019ರ ಲೋಕಸಭಾ ಚುನಾವಣೆಯಲ್ಲಿ ಗೆದ್ದ ಶೇ.43ರಷ್ಟು ಜನರು ಅಪರಾಧಿಕ ಪ್ರಕರಣ ಎದುರಿಸುತ್ತಿದ್ದಾರೆ ಎಂದು ಉಪಾಧ್ಯಾಯ್ ತಮ್ಮ ಅರ್ಜಿಯಲ್ಲಿ ಹೇಳಿದ್ದರು.

## ಭಾರತ ಸುಶಿಕ್ಷಿತ ರಾಷ್ಟ್ರ : ಜಯಣ್ಣ

ದಾವಣಗೆರೆ, ಜ. 29- ನಗರದ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಮತ್ತು ವಿದ್ಯಾಲಯದ ಸಹಯೋಗದಲ್ಲಿ 73ನೇ ಗಣರಾಜ್ಯ ದಿನಾಚರಣೆ ಆಚರಿಸಲಾಯಿತು.

ಸಂಸ್ಥೆಯ ಕಾರ್ಯದರ್ಶಿ ಜಿ. ಜಯಣ್ಣ ಮಾತನಾಡಿ, ಜಗತ್ತಿನ ಶ್ರೇಷ್ಠ ಪ್ರಜಾಪ್ರಭುತ್ವ ರಾಷ್ಟ್ರ ಭಾರತ. ಭಾರತದ ಸಂವಿಧಾನ ಸಂಸ್ಕೃತಿಯ ಪ್ರತೀಕವಾಗಿದೆ ಎಂದು ಹೇಳಿದರು. ಭಾರತ ಸುಶಿಕ್ಷಿತ ರಾಷ್ಟ್ರವಾಗಿದೆ. ಮಕ್ಕಳ ಆನಂದವೇ ಸ್ವಾತಂತ್ರವಾಗಿತ್ತು. ಆದರೆ ಇಂತಹ ಕಾರ್ಯಕ್ರಮಗಳನ್ನು ನಾವು ಅವರೊಂದಿಗೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂದು ಹೇಳುತ್ತಾ, ಸಂವಿಧಾನ ಎಂದರೇನು ಮತ್ತು ಅದರ ಮಹತ್ವದ ಬಗ್ಗೆ ತಿಳಿಸಿದರು. ಭಾರತಿ ಹೆಗ್ಡೆ ಮಾತಾಜಿ, ಜಿ. ಮಂಜುನಾಥ್, ಸುಗುಣ ಮಾತಾಜಿ, ಶೈಕ್ಷಣಿಕ ಸಂಯೋಜಕ ಜಿ. ಶಿವರಾಜ್, ರೇಣುಕಾ ಮಾತಾಜಿ ಉಪಸ್ಥಿತರಿದ್ದರು.

## ನಗರಕ್ಕೆ ಇಂದು ಸೈನಿಕ ಕಲ್ಯಾಣಾಧಿಕಾರಿಗಳ ಭೇಟಿ

ಶಿವಮೊಗ್ಗದಿಂದ ಸೈನಿಕ ಕಲ್ಯಾಣಾಧಿಕಾರಿಗಳು ಇಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1 ರವರೆಗೆ ದಾವಣಗೆರೆ ಜಿಲ್ಲಾ ಮಾಜಿ ಯೋಧರ ವಿವಿಧೋದ್ದೇಶ ಸಂಘ, ನಂ.17, ಸೂಪರ್ ಮಾರ್ಕೆಟ್ ಕಾಂಪ್ಲೆಕ್ಸ್, ಚರ್ಚ್ ರಸ್ತೆ, ಎಂ.ಸಿ.ಸಿ 'ಎ' ಬ್ಲಾಕ್, ಇಲ್ಲಿ ಹಾಜರಿದ್ದು, ಸ್ಥಳೀಯ ಮಾಜಿ ಸೈನಿಕರ ಮತ್ತು ಅವರ ಅವಲಂಬಿತರ ಕುಂದು ಕೊರತೆ ಗಳನ್ನು ಆಲಿಸಲಿದ್ದಾರೆ ಎಂದು ಉಪ ನಿರ್ದೇಶಕರು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಶಿವಮೊಗ್ಗ ಇವರು ತಿಳಿಸಿದ್ದಾರೆ.

## ಸಂಪ್ರದಾಯಗಳು ನಮ್ಮ ಬದುಕಿನ ಸಾಂಸ್ಕೃತಿಕ ಬೇರುಗಳು

**ಹರಿಹರ : ಕುರುಹಿನಶೆಟ್ಟಿ ಸಮಾಜದ ಕಾರ್ಯಕ್ರಮದಲ್ಲಿ ಹೆಚ್.ಕೆ. ಕೊಟ್ರಪ್ಪ**

ಹರಿಹರ, ಜ. 29- ಸಂಪ್ರದಾಯಗಳು ನಮ್ಮ ಬದುಕಿನ ಸಾಂಸ್ಕೃತಿಕ ಬೇರುಗಳು. ಇವುಗಳನ್ನು ಅವಲೋಕಿಸಿದಾಗ ನಮಗೆ ಮಹತ್ವ ಅರ್ಥವಾಗುತ್ತದೆ ಎಂದು ಹೆಚ್.ಕೆ. ಕೊಟ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಶ್ರೀ ನೀಲಕಂಠೇಶ್ವರ ಬಳಗದವರು ಏರ್ಪಡಿಸಿದ್ದ, ಕುರುಹಿನಶೆಟ್ಟಿ ಸಮಾಜದ ಸಮಾನ ಮನಸ್ಕರ ಸೌಹಾರ್ದ ಕೂಟದ ಅಂಗವಾಗಿ ನಡೆದ ಸಾಮೂಹಿಕ ಸುನೇವು ಪೂಜಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡುತ್ತಿದ್ದರು.

ಈಗಿನಂತೆ ಈ ಹಿಂದೆ ಫೋನ್, ಮೊಬೈಲ್ ಇರಲಿಲ್ಲ. ಒಬ್ಬರು ಇನ್ನೊಬ್ಬರಿಗೆ ಸಂಪರ್ಕಿಸಲು ಕಾಲಾವಕಾಶ ಬೇಕಾಗುತ್ತಿತ್ತು. ಪರಸ್ಪರ ಪರಿಚಯ, ವಿಚಾರ ವಿನಿಮಯಕ್ಕಾಗಿ, ವರ್ಷಕ್ಕೊಮ್ಮೆ ಒಂದು ಕಡೆ ಕುಲಬಾಂಧವರು ಸೇರುವ ಹಿನ್ನೆಲೆಯಲ್ಲಿ ಪುಷ್ಯ ಮಾಸದ ಒಂದು ದಿನದಲ್ಲಿ ಊರು ಹೊರಗೆ ದೇವರು ಮಾಡಿ, ಪೂಜಿಸುವ ಪದ್ಧತಿ ಇತ್ತು. ಈಗ ಅದೇ ಸಂಪ್ರದಾಯ ಮುಂದುವರೆದಿದೆ ಎಂದವರು ಹೇಳಿದರು.

ಅತಿಥಿಯಾಗಿ ಆಗಮಿಸಿದ್ದ ದಾವಣಗೆರೆಯ ನಾಗರಾಜಪ್ಪ ಮಾತನಾಡಿ, ಇಂಥ ಕಾರ್ಯಕ್ರಮಗಳಿಂದ ಸಮಾಜದ ಕುಲಬಾಂಧವರ ಐಕ್ಯತೆಗೆ ಸಹಕಾರಿ ಆಗುತ್ತದೆ. ವಧು-ವರರ ಅನ್ವೇಷಣೆಗೂ ಅನುಕೂಲವಾಗುತ್ತದೆ ಎಂದರು.

ನಗರಸಭೆ ಸದಸ್ಯರಾದ ಆಟೋ ಡ್ರೈವರ್ ಹನುಮಂತಪ್ಪ, ಹರಿಹರ ತಾಲ್ಲೂಕು ನೇಕಾರ ಸಮುದಾಯಗಳ ಒಕ್ಕೂಟದ ಅಧ್ಯಕ್ಷರಾದ ಪ್ರಕಾಶ್ ಕೋಳೂರು, ಕುರುಹಿನಶೆಟ್ಟಿ ಕೇಂದ್ರ ಸಂಘ, ಬೆಂಗಳೂರು ಸದಸ್ಯ ವಿಠ್ಠಲ್ ಅಮಾಶಿ, ರಾಣೇಬೆನ್ನೂರಿನ ವಿಶ್ವನಾಥ್, ಶಂಕ್ರಪ್ಪ, ನೀಲಕಂಠೇಶ್ವರ ಬಳಗದ ಪದಾಧಿಕಾರಿಗಳಾದ ವೀರಣ್ಣ ಅಗಡಿ, ಗಂಗಾಧರ್ ಕೊಟಗಿ, ಮಂಜುನಾಥ್ ಹೆಚ್ ಅಗಡಿ, ಮಂಜುನಾಥ್ ಎಂ ಅಗಡಿ, ಪ್ರಭು ಕೊಟಗಿ, ಮಹಿಳಾ ಪದಾಧಿಕಾರಿಗಳಾದ ಜಿ.ಕೆ. ಅರುಣಾ, ಮಂಜುಳಾ ಅಗಡಿ, ರೇಣು ಖಿಲಿಜಿ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಸರ್ಕಾರ (ಜಲಸಂಪನ್ಮೂಲ ಇಲಾಖೆ)
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ನಂ.1, ಜಲಮಾಪನ ವಿಭಾಗ, ರಾಜಘಟ್ಟ ರಸ್ತೆ, ರೈಲ್ವೆ ಸ್ಟೇಷನ್ ಹತ್ತಿರ,ಹಾಸನ, ದೂ: 08172-267539
ಟೆಂಡರ್ ಪ್ರಕಟಣೆ ಸಂಖ್ಯೆ- 07/2021-22, ದಿನಾಂಕ: 28-01-2022
ಕಾರ್ಯಪಾಲಕ ಇಂಜಿನಿಯರ್, ನಂ.1. ಜಲಮಾಪನ ವಿಭಾಗ, ಹಾಸನ ಇವರು ಹಾಸನದಲ್ಲಿನ ವಿಭಾಗ ಮತ್ತು ಉಪವಿಭಾಗ ಕಛೇರಿ ಕಟ್ಟಡಗಳ ನಿರ್ವಹಣಾ ಕಾಮಗಾರಿ ಮತ್ತು ದಾವಣಗೆರೆ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಬರುವ ಮಳೆ ಮಾಪನ ಕೇಂದ್ರಗಳ ಮಾದರೀಕರಣ ಕಾಮಗಾರಿಗಳನ್ನು ನಿರ್ವಹಿಸಲು ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಐಟಂವಾರು ಟೆಂಡರ್‌ಗಳನ್ನು e-procurement ನಲ್ಲಿ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ http://eproc.karnataka.gov.in-eportal/index.seam ನಲ್ಲಿ ಪಡೆಯಬಹುದು.
ಸಹಿ/- ಕಾರ್ಯಪಾಲಕ ಇಂಜಿನಿಯರ್, ನಂ:1 ಜಲಮಾಪನ ವಿಭಾಗ, ಹಾಸನ

ಸಾರ್ವಜನಿಕ ಪ್ರಕಟಣೆ
ನನ್ನ ಕಕ್ಷಿದಾರರಾದ **ಶ್ರೀ ಕೆ. ಶಿವಕುಮಾರ್ ಬಿನ್ ಲೇಟ್ ಪಟೇಲ್ ನಾರಪ್ಪ,** 1506/10, ಸಿದ್ದೇಶ್ವರ ನಿಲಯ, 8ನೇ ಮೇನ್, ವಿದ್ಯಾನಗರ, ದಾವಣಗೆರೆ, ದಾವಣಗೆರೆಯವರು ನೀಡಿದ ಮಾಹಿತಿ ಮೇರೆಗೆ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ನನ್ನ ಕಕ್ಷಿದಾರರ ಒಟ್ಟು ಕುಟುಂಬದ ದಾವಣಗೆರೆ ಕಸಬಾ ಹೋಬಳಿ, ದಾವಣಗೆರೆ ಗ್ರಾಮ ಸರ್ವೆ ನಂ. 124/2ರ ಅಳತೆ 3 ಎಕರೆ ಜಮೀನಿನಲ್ಲಿ ನನ್ನ ಕಕ್ಷಿಗಾರರಿಗೆ ಒಟ್ಟು ಕುಟುಂಬದ ಆಸ್ತಿಯಲ್ಲಿ 30 ಗುಂಟೆ ಪಾಲಿದ್ದು, ಉಳಿದಂತೆ ತಲಾ 30 ಗುಂಟೆ ಕೆ. ಮಂಜುನಾಥ, ಕೆ. ನಂಜಪ್ಪ, ಎನ್ ಶಶಿಕುಮಾರ್‌ರವರಿಗೆ ಸೇರತಕ್ಕದ್ದು ಇದ್ದು ಸಹ ನನ್ನ ಕಕ್ಷಿಗಾರರಿಗೆ ತಿಳಿಸದೆ ಈ ಜಮೀನಿನಲ್ಲಿ ಅಂದಾಜು 60 ನಿವೇಶನಗಳನ್ನು ವಿಂಗಡಿಸಿ ಕೆ.ಎಂ. ಪ್ರಶಾಂತಕುಮಾರ್‌ರವರಿಗೆ ಸೈಟ್ ನಂ. 6, ಡೋರ್ ನಂ.1303/6ನ್ನು ರೂ. 14 ಲಕ್ಷಕ್ಕೆ 17971/20-21 ರಲ್ಲಿ ನೋಂದಾಯಿಸಿ, ಮೋಸ ಮಾಡಿದ್ದು, ಇದು ನನ್ನ ಕಕ್ಷಿದಾರರ ಹಕ್ಕಿಗೆ ಬಂಧನಕಾರಿ ಆಗುವುದಿಲ್ಲ.ಈ ಕುರಿತಾಗಿ ನನ್ನ ಕಕ್ಷಿದಾರರ ಮೇಲ್ಕಂಡ ತನ್ನ ಸಹೋದರರು, ಸಹೋದರರಿಗೆ, ಸಬ್ ರಿಜಿಸ್ಟ್ರಾರ್, ದಾವಣಗೆರೆಗೆ ನೋಟಿಸು ನೀಡಿದ್ದು ಕಾರಣ ಯಾರು ಸಾರ್ವಜನಿಕರು ಮೇಲ್ಕಂಡ ಜಮೀನು ಸೈಟುಗಳನ್ನು ಖರೀದಿಸಿ ಲುಕ್ಸಾನು ಹೊಂದಿ, ಹಕ್ಕು ನೀವು ಪಡೆಯುವುದಿಲ್ಲ ಎಂಬುದಾಗಿ ಕಾನೂನು ಅಡಿಯಲ್ಲಿ ತಿಳಿಸಿರುತ್ತಾರೆ. ಈ ಕುರಿತಾಗಿ ದಾವಣಗೆರೆ ಪ್ರಧಾನ ಸಿವಿಲ್ ನ್ಯಾಯಾಲಯ 0570/20 ರಲ್ಲಿ ನಿರೋಧಾಜ್ಞೆ ಸಹ ಇರುತ್ತದೆ.
ಸಹಿ/-
(ಕೆ. ಶಿವಕುಮಾರ್, ಕಕ್ಷಿದಾರ)
ಸಹಿ/- ಡಾ|| ರೇವಣ್ಣ ಬಳ್ಳಾರಿ,
ಎಂ.ಎ.ಎಲ್‌ಎಲ್‌ಬಿ, ಸಿಸಿಇ ಲಾ, ಹಿರಿಯ ನ್ಯಾಯವಾದಿ,
ಸಾಹಿತಿ, #421, ವಾಲಿ ಬಿಲ್ಡಿಂಗ್, ಲಾಯರ್ ರಸ್ತೆ,
ಕೆ.ಬಿ. ಬಡಾವಣೆ, ದಾವಣಗೆರೆ-577002.
ಮೊ : 94483 39322, 96323 22652.

SHREE VEERABHADRESHWARA CONSULTANCY SERVICES
CIVIL ENGINEERS AND DEVELOPERS
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422
WE OFFER THE FOLLOWING SERVICE :
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS

ಹೆಲ್ತ್‌ಕೇರ್ ಹೋಮಿಯೋಪತಿ
HEALTHCARE HOMOEOPATHY
FREE HOMOEOPATHY MEDICAL CAMP
* ಕೂದಲು ಸಮಸ್ಯೆ * ಡ್ಯಾಂಡ್ರಫ್/ಹೊಟ್ಟು ಸಮಸ್ಯೆ * ಅಲೋಫೇಸಿಯಾ ಏರಿಯಾಟ್ * ಮೊಡವೆ * ಲಿಚೇನ್ ಪ್ಲಾನಸ್ * ಚರ್ಮ ಸಮಸ್ಯೆ * ಫಂಗಲ್ ಇನ್ಫೆಕ್ಷನ್/ತೂರ್ಕೆ * ಸೋರಿಯಾಸಿಸ್ * ವಿಟಿಲಿಗೋ/ವೈಟ್ ಪ್ಯಾಚಸ್ * ಕೀಲು ನೋವು * ಸಂಧಿವಾತ * ಸ್ಪಾಂಡಿಲೋಸಿಸ್ * ಉಸಿರಾಟದ ತೊಂದರೆ * ಅಸ್ತಮಾ * ದೂಳಿನ ಅಲರ್ಜಿ * ಸೈನುಟೀಸ್ * ಉಬ್ಬಿದ ರಕ್ತನಾಳಗಳು * ಥೈರಾಯ್ಡ್ ಸಮಸ್ಯೆ * ಡಿಸ್ಕ್ ಸಮಸ್ಯೆಗಳು * ಗಲಗ್ರಂಥಿಯ ಉರಿಯೂತ * ಮುಟ್ಟಿನ ಅಸ್ವಸ್ಥತೆಗಳು * ಪಿಸಿಓಡಿ * ಬಂಜೆತನ * ರೋಗ ಪ್ರತಿಯೋಧಕ ಸಮಸ್ಯೆಗಳು
# 2938/2, 5th Main, 3rd Cross, MCC "B" Block, Mama's Joint Road
Davangere-04. Contact : 8618330726, 9148290536

I SWIPE TECHNOLOGIES PVT LTD
WE ARE HIRING
ALERT FOR WALK IN INTERVIEW
JOB OPENINGS : DAVANGERE., HAVERI, CHITRADURGA
1) Territory Sales Managers (only Male Candidate's Purely Sales Background) 2) Operations Executives (only Female Candidates - must know English Hind) 3) HR & Accounts 4) Sales Executives and Promoters
VENUE & TIMING : 10:00 AM TO 1:00 PM
I SWIPE TECHNOLOGIES PVT LTD
MAGGAN'S PLAZA PJ EXTENSION RAM & CO CIRCLE
NEAR BANK OF BARODA, DAVANAGERE - 577002.
CONTACT NUMBER : 95381 23450

ಮಾಂತ್ರಿಕ ಮೋಡಿ ಬೆಟ್ಟಪ್ಪ ಜ್ಯೋತಿಷ್ಯರು
Most Populr Astrologer

ಉಚಿತ ಭವಿಷ್ಯ ಖಚಿತ ಪರಿಹಾರ, ಪೋನ್ ಮೂಲಕ ಸಂಪರ್ಕಿಸಿ
ನಂ.1 ವಶೀಕರಣ ಸ್ಪೆಷಲಿಸ್ಟ್, ನೀವು ಇಷ್ಟಪಟ್ಟವರು ನಿಮ್ಮಂತಾಗಲು
ನಿಮ್ಮ ಸಮಸ್ಯೆಗಳೇನು ? ನಿಮ್ಮ ಸಂಕಷ್ಟಗಳೇನು ? ನಮ್ಮಲ್ಲಿ ಕೇಳಿ ತಿಳಿಯಿರಿ
ದೇವಿ ಉಪಾಸಕರು, ಸರ್ವಮಂತ್ರ ವಿದ್ಯೆಯಿಂದ ನಿಮ್ಮ ಸಮಸ್ಯೆಗಳಾದ ವಿದ್ಯೆ, ಉದ್ಯೋಗ, ಮದುವೆ ವಿಳಂಬ, ಮಾಟ-ಮಂತ್ರ, ಯಂತ್ರ-ಮಂತ್ರ, ಸ್ತ್ರೀ-ಪುರುಷ ವಶೀಕರಣ, ಲೈಂಗಿಕ ಗುಪ್ತ ಮಾನಸಿಕ ಚಿಂತೆ, ದಾಂಪತ್ಯ ಸಮಸ್ಯೆ, ಬಲಿಷ್ಠ ಗಿಡಮೂಲಿಕೆಗಳಿಂದ ಪರಿಹಾರ ಮಾಡಿತ್ತಾರೆ.
ವಿ.ಸೂ. : ನಿಮ್ಮ ಯಾವುದೇ ಸಮಸ್ಯೆಗಳಿಗೆ 9 ದಿನಗಳೊಳಗೆ 100% ಪರಿಹಾರ ಶತಸಿದ್ಧ. ನಿಮ್ಮ ದಾವಣಗೆರೆ ನಗರದಲ್ಲಿ ಇಂದೇ ಭೇಟಿ ಕೊಡಿ
ಮೊಬೈಲ್ : 89716 99826

ದಾಖಲೆ ಕಳೆದಿದೆ
**ಅಜ್ಗರ್ ಅಲಿ ಖಾನ್ ಬಿನ್ ಖಲೀಲ್ ಖಾನ್, ದಾವಣಗೆರೆ ನಗರ** ವಾಸಿಯಾದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಇವರು ದಿನಾಂಕ 25.01.2022 ರಂದು ತಮ್ಮ ಸ್ವತ್ತಿಗೆ ಸಂಬಂಧಿಸಿದ ಲೆನಿನ್ ನಗರ, ಹೊಸ ನಿಟುವಳ್ಳಿ ಬಡಾವಣೆಯಲ್ಲಿ ಬರತಕ್ಕ ಸೈಟ್ ನಂ. 24 ಚಾಲ್ತಿ ಮುನಿಸಿಪಲ್ ಡೋರ್ ನಂ. 1726/24 ಅಳತೆ : 38x63 ಅಡಿವುಳ್ಳ ಖಾಲಿ ನಿವೇಶನವನ್ನು ಈ ಹಿಂದೆ ದಿನಾಂಕ 03.01.2005 ರಂದು ದಾವಣಗೆರೆ ಸಿಟಿ ರಿಜಿಸ್ಟ್ರಾರ್ ಆಫೀಸಿನಲ್ಲಿ 1ನೇ ಪುಸ್ತಕದ ಸಿ.ಡಿ. ನಂ. ಡಿವಿಜಿಡಿ 24ರಲ್ಲಿ ರಿ.ನಂ. ಡಿವಿಜಿ-1-8865/04-05 ನಂಬರ್ ಆಗಿ ರಿಜಿಸ್ಟರ್ ಆಗಿರುವ ಶುದ್ಧ ಕ್ರಯಪತ್ರದ ಮೂಲಕ ಮೇಲ್ಕಾಣಿಸಿದ ಸ್ವತ್ತನ್ನು ಖರೀದಿಸಿರುತ್ತೇನೆ. ಪೂರ್ವ ದಾಖಲಾತಿಗಳಾದ ಕ್ರಯಪತ್ರ ದಿನಾಂಕ 05.10.1988 ರಿ. ನಂ. 3299/88-89 ಒರಿಜಿನಲ್ ಪತ್ರ ಅವರ ಬೈಕ್‌ನಲ್ಲಿ ಇಟ್ಟಿದ್ದು, ಸದರಿ ಬೈಕನ್ನು ದಾವಣಗೆರೆ ಪಿ.ಬಿ. ರಸ್ತೆಯ ಸಬ್‌ರಿಜಿಸ್ಟ್ರಾರ್ ಆಫೀಸಿನ ಆವರಣದಲ್ಲಿ ನಿಲ್ಲಿಸಿದಾಗ ಮೂಲ ದಾಖಲಾತಿಗಳು ಆಕಸ್ಮಿಕವಾಗಿ ಕಳೆದುಹೋಗಿರುತ್ತದೆ. ಮೇಲ್ಕಾಣಿಸಿದ ಸಂಬಂಧಪಟ್ಟ ಇಲಾಖೆಯಿಂದ ನಕಲು ದಾಖಲಾತಿ ಪಡೆಯಲು ಸ್ವೀಕೃತಿ ನೀಡಬೇಕೆಂದು ದಾವಣಗೆರೆ ಸಿಟಿ ಗಾಂಧಿನಗರ ಪೊಲೀಸ್ ಠಾಣೆಯಲ್ಲಿ ಠಾಣಾ ಮಿಸ್ ನಂ.: 13/2022 ರಲ್ಲಿ ದೂರು ದಾಖಲಿಸಿರುತ್ತಾರೆ. ಸದರಿ ಮೂಲ ದಾಖಲಾತಿಗಳು ಯಾರಿಗಾದರೂ ಸಿಕ್ಕಲ್ಲಿ ಹತ್ತಿರದ ಪೊಲೀಸ್ ಠಾಣೆಯನ್ನು ಸಂಪರ್ಕಿಸಬೇಕಾಗಿ ಕೋರಲಾಗಿದೆ.
**ಅಜ್ಗರ್ ಅಲಿ ಖಾನ್ ಅವರ ದೂ. ಸಂಖ್ಯೆ: 73491 65671**

ಸಾರ್ವಜನಿಕ ಪ್ರಕಟಣೆ
ದಾವಣಗೆರೆ ನಗರದ ಹಳೆ ಪಿ.ಬಿ. ರಸ್ತೆಯಲ್ಲಿ ಬರುವ ದೊಡ್ಡಬಾತಿ ಗ್ರಾಮಕ್ಕೆ ಸೇರಿದ ಸ.ನಂ. 149/6 ಇದರಲ್ಲಿ ಒಟ್ಟು 16 ಗುಂಟೆ ಜಾಗ ಇದ್ದು, ಇದರ ಅಳತೆ 80 ಅಡಿ ಪೂರ್ವ-ಪಶ್ಚಿಮ ಹಾಗೂ 214 ಅಡಿ ಉತ್ತರ ದಕ್ಷಿಣ ಇದ್ದು ಈ ಜಾಗದ ಪೂರ್ವ ದಿಕ್ಕಿಗೆ 149/7 ರಲ್ಲಿ 5 ಗುಂಟೆ ಜಾಗವಿರುತ್ತದೆ ಎಂದು ಹನುಮಂತಪ್ಪ ಇವರು ಅಕ್ರಮವಾಗಿ ಮಾರಾಟ ಮಾಡಲು ಪ್ರಯತ್ನ ಮಾಡುತ್ತಿದ್ದು, ಸದರಿ ಜಾಗಕ್ಕೆ ಸಂಬಂಧಿಸಿದಂತೆ ದಾವಣಗೆರೆಯ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ DS ನಂ. 1/22 ಪ್ರಕರಣ ದಾಖಲಾಗಿದ್ದು, ಸದರಿ ಜಾಗವನ್ನು ಯಾರೂ ಖರೀದಿಸಬಾರದೆಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ.
ಸ್ಥಳ : ದಾವಣಗೆರೆ.
ದಿನಾಂಕ : 29.01.2022
ಸಹಿ/- ದಿನೇಶ್ ಹೆಚ್. ಪಾಟೀಲ್
ಬಿಎ., ಎಲ್‌ಎಲ್‌ಬಿ, ವಕೀಲರು
ಡೆಂಟಲ್ ಕಾಲೇಜ್ ಎದುರು, 2ನೇ ಮಹಡಿ, ಕೊಟ್ರೇಶ್ವರ ಬೆಣ್ಣೆ ದೋಸೆ ಹೋಟೆಲ್, ಹತ್ತಿರ, ದಾವಣಗೆರೆ. ಫೋ. 94483 19294

# ವಾರ ಭವಿಷ್ಯ

**ದಿನಾಂಕ : 30.01.2022 ರಿಂದ 05.02.2022**

**– ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ರಾಜಕೀಯ ಕ್ಷೇತ್ರದಲ್ಲಿರುವವರಿಗೆ ಪಕ್ಷದ ವರಿಷ್ಠರು ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸಿ, ತಮ್ಮ ಸಾಮರ್ಥ್ಯವನ್ನು ತೋರುವ ಸದಾವಕಾಶ ಬರಲಿದೆ. ಉದ್ಯಮದಲ್ಲಿರುವವರ ಅಮೂಲ್ಯ ದಾಖಲೆಗಳು ಕಳೆದುಹೋಗುವ ಸಂಭವವಿದೆ. ಆದಾಯದ ಮೂಲದಲ್ಲಿ ಹರಿವು, ವಿದ್ಯಾರ್ಥಿಗಳು ಹೆಚ್ಚಿನ ಸಾಧನೆ ಮಾಡುವ ಅತ್ಯುತ್ತಮ ಅವಕಾಶಗಳು ಬರಲಿವೆ. ರೈತಾಪಿ ಮಿತ್ರರಿಗೆ ಸಕಾರಾತ್ಮಕ ಪ್ರತಿಕ್ರಿಯೆ ಬರಲಿದೆ. ಹಿರಿಯರೊಂದಿಗೆ ಸಹಕರಿಸಿ, ಶುಭ ಕಾರ್ಯಗಳಿಗೆ ಭಾಗವಹಿಸುವಿರಿ, ನಿರುದ್ಯೋಗಿಗಳಿಗೆ ನೌಕರಿ ಸಿಗಲಿದೆ. ಮಹಿಳೆಯರಿಗೆ ಶುಭ ದಿನಗಳು. ಕುಲದೇವತಾ ದರ್ಶನ ಮಾಡಿ. ಸೋಮ -ಮಂಗಳ- ಬುಧ-ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ನೀವು ಮಾಡಿದ ಮಹತ್ಕಾರ್ಯವೊಂದರಿಂದಾಗಿ ಕೆಲಸ ಮಾಡುತ್ತಿರುವ ಸಂಸ್ಥೆಗೆ ಭಾರಿ ಲಾಭ, ಅದರಲ್ಲಿ ನಿಮಗೂ ಕೂಡ ಕೊಂಚ ಲಾಭಾಂಶ ದೊರೆಯಲಿದೆ. ಮಹಿಳೆಯರಿಗೆ ಒತ್ತಡದಿಂದಾಗಿ ಆರೋಗ್ಯದ ಮೇಲೆ ಅಡ್ಡ ಪರಿಣಾಮ, ಕಾಲಕಾಲಕ್ಕೆ ಊಟೋಪಚಾರ ಹಾಗೂ ವಿಶ್ರಾಂತಿ ಪಡೆಯಿರಿ. ಪ್ರೇಮ - ಪ್ರೀತಿಯಲ್ಲಿ ಸಿಲುಕಿರುವವರು ಸಾಧ್ಯವಾದಷ್ಟು ಬೇಗ ಒಂದು ನಿರ್ಧಾರಕ್ಕೆ ಬನ್ನಿ, ಹಿರಿಯರ ಕೋರಿಕೆಗಳನ್ನು ಸಾಧ್ಯವಾದಷ್ಟು ಪೂರೈಸಿ, ಕೃಷಿ ಕ್ಷೇತ್ರದಲ್ಲಿರುವವರಿಗೆ ಒಳ್ಳೆಯ ಸುದ್ದಿ, ಬೆಳೆದ ಉತ್ಪನ್ನಗಳಿಗೆ ಹೆಚ್ಚಿನ ಲಾಭವಾಗಲಿದೆ. ಖಾಸಗಿ ಕಂಪನಿ ನೌಕರರು ಸದ್ಯದ ಪರಿಸ್ಥಿತಿಯಲ್ಲಿ ಉದ್ಯೋಗ ಬದಲಿಸುವುದು ಬೇಡ. ಬುಧ -ಗುರು-ಶನಿ-ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಇಷ್ಟು ದಿನ ಸರ್ಕಾರದಿಂದಾಗಬೇಕಾಗಿದ್ದ ಕೆಲಸಗಳು ಮಂದಗತಿಯಲ್ಲಿ ಸಾಗುತ್ತಿದ್ದು, ಪ್ರಭಾವೀ ವ್ಯಕ್ತಿಗಳ ಶಿಫಾರಸ್ಸಿನಿಂದಾಗಿ ನಿಮ್ಮ ಕಡತಕ್ಕೆ ಉತ್ತಮ ಚಾಲನೆ ಸಿಗಲಿದೆ. ಅನಾರೋಗ್ಯದಿಂದ ಬಳಲುತ್ತಿರುವ ಹಿರಿಯರಿಗೋಸ್ಕರ ವೈದ್ಯಕೀಯ ವೆಚ್ಚವನ್ನು ಭರಿಸಬೇಕಾಗಬಹುದು. ಪಾಲುದಾರಿಕೆ ವ್ಯವಹಾರದಲ್ಲಿ ಬೆಳವಣಿಗೆ ಸಾಧಾರಣ, ಹಣಕಾಸಿನ ಪರಿಸ್ಥಿತಿ ಸಾಧಾರಣ, ವಿದ್ಯಾರ್ಥಿಗಳು ತಮ್ಮ ಆಸಕ್ತಿ ಹಾಗು ಶ್ರದ್ಧೆಗೆ ಅನುಗುಣವಾಗಿ ಫಲಿತಾಂಶವನ್ನು ಪಡೆಯುವರು. ಸೋದರನ ವಿವಾಹ ಪ್ರಸಂಗ ಮರುಪ್ರಸ್ತಾಪವಾಗಲಿದೆ. ಭಾನು -ಮಂಗಳ -ಬುಧ- ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಆರ್ಥಿಕ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಹಲವು ರೀತಿಯಲ್ಲಿ ಯತ್ನಿಸುವ ನೀವು ಈ ವಾರ ಈ ವಿಷಯದಲ್ಲಿ ಸಾಕಷ್ಟು ಯಶಸ್ವಿಯಾಗುವಿರಿ. ಹಣಕಾಸು ಸಂಸ್ಥೆಗಳಲ್ಲಿ ಕೆಲಸ ಮಾಡುವವರು ತಮ್ಮ ಕರ್ತವ್ಯದಲ್ಲಿ ಸಾಕಷ್ಟು ಎಚ್ಚರದಿಂದ ಇರುವುದು ಉತ್ತಮ. ಆದಾಯವು ನಿರೀಕ್ಷಿತ ಮಟ್ಟದಲ್ಲೇ ಇರುವುದರಿಂದ ಅದರ ಬಗ್ಗೆ ಚಿಂತೆ ಬೇಡ. ಮಧ್ಯ ವಯಸ್ಕರಿಗೆ ಮನಸ್ಸು ಅಧ್ಯಾತ್ಮದ ಕಡೆ ತಿರುಗಲಿದ್ದು, ಅನೇಕ ಅಧ್ಯಾತ್ಮಿಕ ಸಭೆ-ಸಮಾರಂಭಗಳಲ್ಲಿ ಭಾಗವಹಿಸುವರು. ಸಾಧ್ಯವಿದ್ದಲ್ಲಿ ಗುರುಚರಿತ್ರೆ ಪಾರಾಯಣ ಮಾಡಿ. ಭಾನು -ಸೋಮ -ಗುರು -ಶುಭ ದಿನಗಳು.

**ಸಿಂಹ ( ಮಘ, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ವಿದೇಶದಲ್ಲಿರುವ ಮಗನಿಂದ ನಿಮ್ಮ ಹೊಸ ಯೋಜನೆಗಳಿಗೆ ಆರ್ಥಿಕ ನೆರವು. ರಾಜಕಾರಣಿಗಳು ಎಚ್ಚರಿಕೆಯಿಂದಿರಿ, ಅನಾರೋಗ್ಯದ ಸಮಸ್ಯೆಯನ್ನು ಎದುರಿಸಬೇಕಾದೀತು. ಕೈಸಾಲ ಕೊಟ್ಟವರ ಕಾಟದಿಂದ ಪಾರಾಗಲು ಮತ್ತೊಂದು ಕಡೆಯಿಂದ ಸಾಲ ತೆಗೆದುಕೊಂಡು ಅದನ್ನು ತೀರಿಸುವುದು ಉತ್ತಮ. ತಾಂತ್ರಿಕ ಕ್ಷೇತ್ರದಲ್ಲಿ ನಿಪುಣರಾದವರಿಗೆ ಕಂಪನಿಯಿಂದ ವಿದೇಶ ಪ್ರಯಾಣದ ಅವಕಾಶ ಸಿಗಲಿದೆ. ವಿದ್ಯಾರ್ಥಿಗಳ ಪ್ರಗತಿಗೆ ಬೇಕಾದ ಉತ್ತಮ ಮಾರ್ಗದರ್ಶನ ದೊರೆಯಲಿದೆ. ಇದು ಅವರ ಅದೃಷ್ಟವೇ ಸರಿ. ಸಹೋದ್ಯೋಗಿಗಳೊಂದಿಗೆ ಅನಾವಶ್ಯಕ ಮನಸ್ತಾಪ. ಭಾನು -ಬುಧ -ಶುಕ್ರ- ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ವೃತ್ತಿಯಲ್ಲಿ ಹೆಚ್ಚಿನ ಮಟ್ಟವಲ್ಲದಿದ್ದರೂ ಸಾಧಾರಣ ಎನ್ನಬಹುದಾದ ಬೆಳವಣಿಗೆ ಕಂಡುಬರಲಿದೆ. ನೆರೆಹೊರೆಯವರೊಂದಿಗಿದ್ದ ವೈಮನಸ್ಸು ದೂರವಾಗಿ ಸೌಹಾರ್ದತೆ ಮೂಡಲಿದೆ.ಉನ್ನತಾಧ್ಯಯನಕ್ಕೆ ಯತ್ನಿಸುವ ವಿದ್ಯಾರ್ಥಿಗಳು ತಮ್ಮ ಮುಂದಿನ ಆಯ್ಕೆ ಬಗ್ಗೆ ಗೊಂದಲದಲ್ಲಿ ಬೀಳುವರು.. ತುಸು ತಾಳ್ಮೆಯಿಂದ ಚಿಂತಿಸುವುದು ಮೇಲು. ಸಾಮಾಜಿಕವಾಗಿ ಸಿಗಲಿರುವ ನೆರವನ್ನು ಸದುಪಯೋಗಪಡಿಸಿಕೊಳ್ಳುವುದು ಉತ್ತಮ. ವಾಹನಗಳ ಕೊಡುಕೊಳ್ಳುವಿಕೆ ವಿಚಾರದಲ್ಲಿ ಮೋಸ, ಅತಿಯಾದ ಮೋಜು ಭೋಜನ ಕೂಟ ಸದ್ಯದ ಪರಿಸ್ಥಿತಿಗೆ ಅನುಕೂಲಕರವಲ್ಲ. ಆದಾಯದ ಮೂಲ ಸಾಧಾರಣ. ಬುಧ -ಗುರು-ಶುಕ್ರ-ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ನೀವು ಅಂದುಕೊಂಡ ಪ್ರತಿಯೊಂದು ಕೆಲಸವು ನಿಮ್ಮ ನಿರೀಕ್ಷೆಗೆ ವಿರುದ್ಧವಾಗಿ ನಡೆದು ಚಿಂತೆಗೀಡುಮಾಡಲಿದೆ. ರಾಜಕಾರಣಿಗಳು ಆತ್ಮಸಾಕ್ಷಿಗೆ ವಿರುದ್ಧವಾಗಿ ನಡೆದುಕೊಳ್ಳಬೇಕಾಗುತ್ತದೆ. ಹಣಕಾಸಿನ ಪರಿಸ್ಥಿತಿ ಎಷ್ಟೇ ಬಿಕ್ಕಟ್ಟಿನಿಂದ ಕೂಡಿದ್ದರೂ ಕೂಡ ಅವರ ಮನರಂಜನೆಗೆಂದು ತುಸು ಹೆಚ್ಚೇ ಎನ್ನಬಹುದಾದ ಖರ್ಚು, ಸಂಶೋಧನಾ ರಂಗದಲ್ಲಿರುವವರಿಗೆ ಸರ್ಕಾರದಿಂದ ಬರಬೇಕಾಗಿರುವ ಧನ ಸಹಾಯ ಸಕಾಲಕ್ಕೆ ಬಂದೊದಗಲಿದೆ. ವಿದೇಶ ಪ್ರಯಾಣದ ವಿಚಾರವನ್ನು ಸದ್ಯದಮಟ್ಟಿಗೆ ಮುಂದೂಡುವುದು ಮೇಲು. ಇನ್ನೊಬ್ಬರ ಹಣಕಾಸಿನ ವಿಚಾರದಲ್ಲಿ ಜಾಮೀನಾಗುವುದು ಮೂರ್ಖತನ, ವ್ಯಾಪಾರದಲ್ಲಿ ಪ್ರತಿ ಸ್ಪರ್ಧಿಗಳನ್ನು ಹಣಿಯಲು ಉತ್ತಮವಾದ ತಂತ್ರವನ್ನು ಹೆಣೆಯುವಿರಿ. ಗುರು-ಶುಕ್ರ-ಶನಿ- ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಸಮಾಜದಲ್ಲಿ ಇಷ್ಟು ದಿನ ನಿಮ್ಮ ಮೇಲಿದ್ದ ಜನಾಭಿಪ್ರಾಯವು ನಿಮಗೆ ಅನುಕೂಲವಾಗುವಂತೆ ಬದಲಾಗಲಿದೆ. ಹೊಸ ಯೋಜನೆಗಳಲ್ಲಿ ಬರಬಹುದಾದ ಅಡಚಣೆಗಳಿಗೆ ಗೆಳೆಯರಿಂದ ಉತ್ತಮ ಸಲಹೆ ಸಿಗಲಿದೆ. ತಾಂತ್ರಿಕ ಕ್ಷೇತ್ರದಲ್ಲಿ ಪರಿಣಿತ ರಾದವರಿಗೆ ವಿದೇಶಗಳಲ್ಲಿ ಬೇಡಿಕೆ ಹೆಚ್ಚಲಿದೆ. ಬದಲಾಗುವ ಸನ್ನಿವೇಶಕ್ಕೆ ತಕ್ಕಂತೆ ಹೊಂದಿಕೊಳ್ಳಬೇಕಾದ ಪ್ರಸಂಗ ಎದುರಾಗಬಹುದು. ಹೈನುಗಾರಿಕೆ ಅತಿ ಹೆಚ್ಚಿನ ಲಾಭ ತರಲಿದೆ. ಮಕ್ಕಳ ವಿದ್ಯಾಭ್ಯಾಸದಲ್ಲಿದ್ದ ಆತಂಕಗಳು ದೂರವಾಗಲಿವೆ. ಆದಾಯದ ಮೂಲದಲ್ಲಿ ಹೆಚ್ಚಳ. ಭಾನು, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ನೀವು ಈ ಹಿಂದೆ ಆರಂಭಿಸಿರುವ ಉದ್ಯಮವು ಈಗ ಫಲ ಕೊಡಲು ಆರಂಭಿಸಿರುವುದರಿಂದ ಅದರ ಬಗ್ಗೆ ಗಮನವಿಡುವುದು ಮೇಲು. ಆರ್ಥಿಕ ಹರಿವು ತಕ್ಕಮಟ್ಟಿಗಿದ್ದು ಅದು ದೈನಂದಿನ ಜೀವನಕ್ಕೆ ಸಾಕಾಗಲಿದೆ. ಬೇರೆಯವರಿಗೆ ಸಾಮಾಜಿಕ ನ್ಯಾಯ ಕೊಡಿಸಲು ನೀವು ಹೋರಾಟ ಮಾಡಬೇಕಾಗುತ್ತದೆ. ಮಕ್ಕಳ ನಡಾವಳಿಯಲ್ಲಿ ಕಂಡುಬರುವ ವ್ಯತ್ಯಾಸ ಮನಸ್ಸಿಗೆ ಬೇಸರವನ್ನುಂಟು ಮಾಡಲಿದೆ. ಹೂವು, ಹಣ್ಣು, ತರಕಾರಿ, ಹೈನುಗಾರಿಕೆ ವಹಿವಾಟು ಈ ವಾರ ತುಂಬಾ ಚೆನ್ನಾಗಿಯೇ ನಡೆಯಲಿದ್ದು, ಹೆಚ್ಚಿನ ಲಾಭವಾಗಲಿದೆ. ಬೇರೆಯವರ ವಾಹನಗಳನ್ನು ಚಾಲಿಸಲು ಹೋದಲ್ಲಿ ಅಪಾಯ ಎದುರಾಗುವ ಪ್ರಸಂಗ. ಸೋಮ-ಬುಧ -ಗುರು -ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಪ್ರಾಯಕ್ಕೆ ಬಂದ ಮಕ್ಕಳ ವೈಯಕ್ತಿಕ ಸಮಸ್ಯೆಗಳಿಂದಾಗಿ ಕುಟುಂಬದಲ್ಲಿ ಅಶಾಂತಿ ವಾತಾರವಣ, ಇದನ್ನು ಬಹಳ ತಾಳ್ಮೆಯಿಂದ ಮಾತ್ರ ಬಗೆಹರಿಸಲು ಸಾಧ್ಯ. ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿರುವ ಮಹಿಳಾಧಿಕಾರಿಗಳಿಗೆ ಕೈಕೆಳಗಿನ ನೌಕರರ ತಪ್ಪಿನಿಂದಾಗಿ ಅನೇಕ ಸಮಸ್ಯೆಗಳು ಎದುರಾಗಲಿವೆ. ಆದ್ದರಿಂದ ಈ ವಿಚಾರದಲ್ಲಿ ಸಾಕಷ್ಟು ಎಚ್ಚರದಿಂದಿರುವುದು ಮೇಲು. ತಜ್ಞರಾದ ಪ್ರಸೂತಿ ವೈದ್ಯರಿಗೆ ಹೆಚ್ಚಿನ ಬೇಡಿಕೆ ಬರಲಿದೆ. ವ್ಯಾಪಾರ-ವ್ಯವಹಾರದಲ್ಲಿ ವಹಿವಾಟು ಹೆಚ್ಚಿದರೂ ಲಾಭ ಮಾತ್ರ ಅಷ್ಟಕ್ಕಷ್ಟೇ. ಔಷಧಿ ಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ ಸಗಟು ಹಾಗೂ ಚಿಲ್ಲರೆ ವ್ಯಾಪಾರ ದೊಡ್ಡಮಟ್ಟದಲ್ಲಿ ನಡೆಯಲಿದೆ. ವಿದೇಶದಲ್ಲಿ ಉತ್ತಮ ಆದಾಯ ಹೊಂದಿರುವ ಸೋದರನಿಂದ ಹೆಚ್ಚಿನ ನೆರವನ್ನು ನಿರೀಕ್ಷಿಸಬಹುದು. ಗುರು-ಶುಕ್ರ -ಶನಿ -ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ವೈಯಕ್ತಿಕ ಬದುಕಿನಲ್ಲಿ ಅನಿರೀಕ್ಷಿತವಾಗಿ ಅನೇಕ ಬದಲಾವಣೆಗಳು ಅನಿವಾರ್ಯವಾಗಲಿವೆ. ಚಿನಿವಾರ ಪೇಟೆಯಲ್ಲಿ ಹೆಚ್ಚಿನ ವಹಿವಾಟು ನಡೆದು ವ್ಯಾಪಾರಿಗಳಲ್ಲಿ ಉತ್ಸಾಹ ಮೂಡಿಸಲಿದೆ. ಹಿರಿಯರ ನಡಾವಳಿಯಲ್ಲಿ ಉಂಟಾಗುವ ಅನಿರೀಕ್ಷಿತ ಬದಲಾವಣೆ ನಿಮಗೆ ಅಚ್ಚರಿಯನ್ನುಂಟುಮಾಡಲಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಉಂಟಾಗಿದ್ದ ನಿರುತ್ಸಾಹ ಈ ವಾರ ಕಡಿಮೆಯಾಗಲಿದೆ. ಬಂಧುಗಳ ಮನೆಯಲ್ಲಿ ನಡೆಯಲಿರುವ ಮಂಗಳ ಕಾರ್ಯಗಳಿಗೆ ಪರಿವಾರದೊಂದಿಗೆ ಹೋಗಿ ಭಾಗವಹಿಸುವಿರಿ. ಅಪರಿಚಿತರೊಂದಿಗೆ ವೈಯಕ್ತಿಕ ವಿಚಾರಗಳನ್ನು ಹೇಳಬೇಡಿ, ದಿನಸಿ ವ್ಯಾಪಾರಿಗಳು ಗ್ರಾಹಕರೊಂದಿಗೆ ಸೌಹಾರ್ದತೆಯಿಂದ ನಡೆದುಕೊಳ್ಳುವುದು ಮೇಲು. ಮಂಗಳ -ಬುಧ-ಶನಿ -ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉ2ತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ರಚನಾತ್ಮಕ ಕಾರ್ಯಗಳಲ್ಲಿ ಅತ್ಯುತ್ಸಾಹಿಗಳಾದ ನಿಮಗೆ ಅದಕ್ಕೆ ಬೇಕಾದ ಉತ್ತಮ ವೇದಿಕೆ ದೊರೆಯಲಿದೆ. ಸಂಶೋಧನಾ ರಂಗದಲ್ಲಿರುವವರು ನಕಾರಾತ್ಮಕವಾಗಿ ಚಿಂತಿಸುವುದನ್ನು ಬಿಟ್ಟಲ್ಲಿ ಮಾತ್ರ ಮುಂದಿನ ಹಾದಿ ಸುಗಮವಾಗಲು ಸಾಧ್ಯ. ವ್ಯವಹಾರದಲ್ಲಿ ಕಂಡುಬರುತ್ತಿರುವ ಸಮಸ್ಯೆಗಳಿಗೆ ಅನುಭವಿಗಳಾದ ಹಿರಿಯರ ಸಲಹೆಗಳಿಂದ ಮಾತ್ರ ಪರಿಹಾರ ಸಾಧ್ಯ. ವೈಯಕ್ತಿಕ ಆರೋಗ್ಯವನ್ನು ಯಾವುದೇ ಕಾರಣಕ್ಕೂ ಅಲಕ್ಷಿಸಬೇಡಿ. ಸಾಧ್ಯವಾದಷ್ಟು ವೈದ್ಯರ ಸಂಪರ್ಕದಲ್ಲಿರುವುದು ಉತ್ತಮ. ಸಾಧ್ಯವಾದಷ್ಟು ಗುರು ಜಪ ಮತ್ತು ಗುರು ಚರಿತ್ರೆ ಪಠಿಸಿ. ಭಾನು -ಸೋಮ -ಗುರು- ಶುಭ ದಿನಗಳು.

**ವಿಶೇಷ ದಿನಗಳು : ದಿನಾಂಕ : 31.1.2022 ಸೋಮವಾರ ಅಮಾವಾಸ್ಯೆ ಶ್ರೀ ಪುರಂದರದಾಸರ ಆರಾಧನೆ.**

## ಫೆ.27 ರಿಂದ ಪಲ್ಸ್ ಪೋಲಿಯೋ

**(1ನೇ ಪುಟದಿಂದ)** ಡಬ್ಲ್ಯೂಹೆಚ್ಓ ಸಲಹೆಗಾರ ಡಾ.ಶ್ರೀಧರ್ ಮಾತನಾಡಿ, ಫೆ.27 ರಂದು ಬೂತ್‌ಗಳಲ್ಲಿ 5 ವರ್ಷದ ಒಳಗಿನ ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಫೆ.28 ರಿಂದ ಮಾರ್ಚ್ 2 ರವರೆಗೆ 3 ದಿನಗಳ ಕಾಲ ಮನೆ ಮನೆ ಭೇಟಿ ಮಾಡಿ ಬಿಟ್ಟು ಹೋದ ಮಕ್ಕಳಿಗೆ ಲಸಿಕೆ ಹಾಕಲಾಗುವುದು ಎಂದರು.

ಜಿಲ್ಲಾ ಆರೋಗ್ಯಾಧಿಕಾರಿ ಡಾ.ನಾಗರಾಜ್ ಮಾತನಾಡಿ, ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ 93,267 ಮಕ್ಕಳಿಗೆ ಹಾಗೂ ನಗರ ಪ್ರದೇಶದಲ್ಲಿ 66,990 ಮಕ್ಕಳಿಗೆ ಒಟ್ಟು 1,60,257 ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಾಗುವುದು. 1121 ಸ್ಥಿರ ಬೂತ್‌ಗಳು, 1132 ಮೊಬೈಲ್ ಬೂತ್‌ಗಳು ಕಾರ್ಯನಿರ್ವಹಿಸಲಿವೆ. ಕೋವಿಡ್ 19 ಪಿಡುಗಿನ ನಿಮಿತ್ತ ಪ್ರತಿ ಬೂತ್‌ಗಳಲ್ಲಿ ಗರಿಷ್ಠ 200 ಮಕ್ಕಳಿಗೆ ಲಸಿಕೆ ಹಾಕಲು ಮುಂಜಾಗ್ರತೆ ಕ್ರಮವಹಿಸಲಾಗಿದೆ ಎಂದು ತಿಳಿಸಿದರು.

ಆರ್‌ಸಿಹೆಚ್ ಅಧಿಕಾರಿ ಡಾ.ಮೀನಾಕ್ಷಿ ಮಾತನಾಡಿ, ವಿದ್ಯುತ್ ಸರಬರಾಜು ಮಂಡಳಿ 2 ದಿನಗಳ ಕಾಲ ಯಾವುದೇ ಅಡೆತಡೆ ಇಲ್ಲದೆ ವಿದ್ಯುತ್ ಸರಬರಾಜು ಮಾಡುವಂತೆ ಮನವಿ ಮಾಡಿದರು. ಇದೇ ವೇಳೆ ಸಾಂಸ್ ಅಡಿಯಲ್ಲಿ ನ್ಯೂಮೋಕಾಕಲ್ ಕಾಂಜುಗೇಟ್ ಲಸಿಕೆಯ(ಪಿಸಿವಿ) ಕುರಿತಾದ ಭಿತ್ತಿ ಚಿತ್ರಗಳನ್ನು ಬಿಡುಗಡೆ ಮಾಡಲಾಯಿತು.

**ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ ಜಿಲ್ಲಾ ಸಮನ್ವಯ ಸಮಿತಿ ಸಭೆ:** ಜಿಲ್ಲಾಧಿಕಾರಿಗಳು ಸ್ಪರ್ಶ್ ಕುಷ್ಠರೋಗ ಅರಿವು ಆಂದೋಲನ 2022ರ ಕುರಿತಾದ ಸ್ವಾತಂತ್ರ್ಯದ ಅಮೃತ ಮಹೋತ್ಸವದೊಂದಿಗೆ ಕುಷ್ಠರೋಗ ಮುಕ್ತ ಭಾರತದ ಕಡೆಗೆ ಎಂಬ ಭಿತ್ತಿ ಪತ್ರಗಳನ್ನು ಬಿಡುಗಡೆಗೊಳಿಸಿದರು.

ಜಿಲ್ಲಾ ಕುಷ್ಠರೋಗ ನಿಯಂತ್ರಣಾಧಿಕಾರಿ ಡಾ.ಮುರುಳಿಧರ್, ಜಿಲ್ಲಾಸ್ಪತ್ರೆ ಅಧೀಕ್ಷಕ ಡಾ. ಜಯಪ್ರಕಾಶ್, ಡಾ.ರಾಘವನ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

## ಬ್ಯಾಕ್‌ಲಾಗ್ ಹುದ್ದೆ ಭರ್ತಿ: ಕಾರಜೋಳ

**(1ನೇ ಪುಟದಿಂದ)** ಪರಿಶಿಷ್ಟ ಜಾತಿಗೆ ಸೇರಿದ 446 ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ 436 ಒಟ್ಟು 882 ಹುದ್ದೆಗಳ ನೇಮಕಾತಿ ಬಾಕಿ ಇವೆ. ಈ ಎಲ್ಲಾ ಹುದ್ದೆಗಳ ನೇಮಕಾತಿಗೆ ಒಂದು ವಾರದಲ್ಲಿ ಅಧಿಸೂಚನೆ ಹೊರಡಿಸಬೇಕೆಂದು ನಿರ್ಧರಿಸಲಾಗಿದೆ ಎಂದರು.

ಕರ್ನಾಟಕ ಲೋಕಸೇವಾ ಆಯೋಗದ ಮೂಲಕ ಕೈಗೊಳ್ಳಬೇಕಾದ ನೇಮಕಾತಿಗಳನ್ನು ಒಂದು ವಾರದಲ್ಲಿ ಅಧಿಸೂಚನೆ ಹೊರಡಿಸಬೇಕು. ಮುಂದಿನ ಆರು ತಿಂಗಳಲ್ಲಿ ಪ್ರಕ್ರಿಯೆ ಪೂರ್ಣಗೊಳಿಸಿ ಆಯ್ಕೆ ಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಬೇಕೆಂದು ಲೋಕಸೇವಾ ಆಯೋಗವನ್ನು ಕೋರಲು ಕ್ರಮಕೈಗೊಳ್ಳಬೇಕೆಂದು ಎಲ್ಲಾ ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಹಾಗೂ ಇಲಾಖಾ ಮುಖ್ಯಸ್ಥರಿಗೆ ನಿರ್ದೇಶನ ನೀಡಲಾಯಿತು.

# ಬದುಕಿನ ವಿಧಾನ ಬದಲಿಸುವ ಬರಹ

### ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್



ದಾವಣಗೆರೆ, ಜ.29- ಬರಹ ಬದುಕಿನ ವಿಧಾನವನ್ನು ಬದಲಾಯಿಸುತ್ತದೆ. ಓದುಗರು ಇರಲಿ, ಬಿಡಲಿ ಕವಿತೆ, ಕಥೆ ಹೀಗೆ ಏನಾದರೊಂದು ಬರೆಯುವುದರಲ್ಲಿ ಸದಾ ತೊಡಗಿಸಿಕೊಂಡಿರಬೇಕು ಎಂದು ಹಿರಿಯ ಪತ್ರಕರ್ತ, ಸಾಹಿತಿ ಬಿ.ಎನ್. ಮಲ್ಲೇಶ್ ಹೇಳಿದರು.

ಸೃಷ್ಟಿ ಗ್ರಂಥಮಾಲೆ (ಚಿತ್ರದುರ್ಗ) ಹಾಗೂ ಎಸ್.ಆರ್.ಪಿ. ಸಮೂಹ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ ನಗರದ ಕುವೆಂಪು ಕನ್ನಡ ಭವನದಲ್ಲಿ ಇಂದು ಹಮ್ಮಿಕೊಂಡಿದ್ದ ಹಂಶಿ ಸಂಪಾದಕೀಯ ಕೃತಿ 'ಅಂತಃಕರಣದೊಡೆಯ ಅಪ್ಪು-ಗೆ' ಕವನ ಸಂಕಲನ, ಹಂಶಿ ವಿರಚಿತ 'ಬೇಲಿಯ ಹೂವು' ಕಾದಂಬರಿ ಹಾಗೂ ಎಸ್. ಓಂಕಾರಯ್ಯ ತವನಿಧಿ ವಿರಚಿತ 'ವೃಷ್ಟಿ ವೃತ್ತಾಂತ' ವೈಜ್ಞಾನಿಕ ಸಂಶೋಧನಾ ಕೃತಿಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಪ್ರಸ್ತುತ ದಿನಗಳಲ್ಲಿ ಬರೆಯುವವರ ಸಂಖ್ಯೆ ಹೆಚ್ಚಾಗಿದೆ. ಆದರೆ ಓದುಗರು ಕಡಿಮೆಯಾಗಿದ್ದಾರೆ. ಬರೆದ ಪುಸ್ತಕಗಳ ಬಿಡುಗಡೆ ಸಮಾರಂಭಕ್ಕೆ ಸಹೃದಯಿಗಳನ್ನು ಸೇರಿಸುವುದೂ ಕಷ್ಟವಾಗಿದೆ ಎಂದರು.

ಭಯೋತ್ಪಾದಕತೆಗೆ ಭಯೋತ್ಪಾದನೆಯೇ ಮದ್ದಾಗಲು ಸಾಧ್ಯವಿಲ್ಲ. ಕಲೆ ಹಾಗೂ ಸಾಹಿತ್ಯ ಉತ್ತಮ ಮದ್ದಾಗಬಲ್ಲದು ಎಂದು ಅಭಿಪ್ರಾಯಿಸಿದ ಬಿಎನ್ನೆಂ, ಒಬ್ಬ ಓದುಗ ಹಾಗೂ ಬರಹಗಾರ ಮತ್ತೊಬ್ಬ ಓದುಗ ಅಥವಾ ಬರಹಗಾರನನ್ನು ಸೃಷ್ಟಿಸಬಲ್ಲ. ಹೀಗೆ ಸಂಖ್ಯೆ ಹೆಚ್ಚಾದರೆ ಸಮಾಜದಲ್ಲಿ ಬದಲಾವಣೆ ಸಾಧ್ಯವಿದೆ ಎಂದರು.

ಚಿತ್ರರಂಗದ ಅನೇಕ ನಟರು ಕಣ್ಮರೆಯಾದರೂ, ಪುನೀತ್ ರಾಜ್ ಕುಮಾರ್ ಅವರಿಗೆ ದೊರೆತ ಪ್ರೀತಿ, ಸ್ಪಂದನೆ ಬೇರಾವ ನಟನಿಗೂ ಸಿಗಲಿಲ್ಲ. ಸ್ವತಃ ಡಾ.ರಾಜ್ ಕುಮಾರ್ ಅವರಿಗೂ ಸಹ. ಈ ನಿಟ್ಟಿನಲ್ಲಿ ಪುನೀತ್ ಜನಮಾನಸದಲ್ಲಿ ಹೇಗೆ ನೆಲೆ ನಿಂತರು ಎಂಬುದು ಗಮನಾರ್ಹ ಅಂಶ ಎಂದರು.

ಓರ್ವ ನಟ ಹಣ ಸಂಪಾದಿಸಬಹುದು. ನಟನೆ ಮೂಲಕ ಜನಪ್ರಿಯನಾಗಬಹುದು. ಆದರೆ ಸಮಾಜಕ್ಕೆ ಏನು ಕೊಡುಗೆ ನೀಡಿದ್ದಾನೆ ಎಂಬುದನ್ನು ಆಧಾರಿಸಿ ಗುಣವಂತಿಕೆ ಅಳೆಯಲಾಗುತ್ತದೆ. ಅದರಂತೆ ಪುನೀತ್ ಹಣಕ್ಕೆ ಅಥವಾ ಜನಪ್ರಿಯತೆಗೆ ನಟಿಸದೆ ಸಮಾಜಕ್ಕೆ ಏನಾದರೂ ಸೇವೆ ಸಲ್ಲಿಸಬೇಕೆಂಬ ದೃಷ್ಟಿಯಿಂದ ನಟಿಸಿದ್ದರು. ಅವರು ಕೇವಲ ಕೋಟಿಗೊಬ್ಬ ಅಪ್ಪು ಅಲ್ಲ. ಕನ್ನಡ ನಾಡಿನ ಏಳು ಕೋಟಿ ಜನರಿಗೆ ಒಬ್ಬ ಅಪ್ಪು ಎಂದು ಬಣ್ಣಿಸಿದರು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಜಿಲ್ಲಾ 317ಸಿ ಮುಖ್ಯ ಸಂಯೋಜನಾಧಿಕಾರಿ ಲಯನ್ ವಾಸುದೇವ ರಾಯ್ಕರ್, ಪುನೀತ್ ಅವರ ಕೊನೆಯ ಚಿತ್ರ 'ಜೇಮ್ಸ್' ಬಿಡುಗಡೆಯಾಗುವ ಮೊದಲ ದಿನ ಒಂದು ದಿನದ ಮಟ್ಟಿಗೆ ರಾಜ್ಯದಾದ್ಯಂತ ಎಲ್ಲಾ ಚಿತ್ರಮಂದಿರಗಳಲ್ಲೂ ಬಿಡುಗಡೆಯಾಗಲಿ. ಯಾವುದೇ ಪರಭಾಷಾ ಚಿತ್ರಗಳೂ ಆ ದಿನ ಪ್ರದರ್ಶನವಾಗುವುದು ಬೇಡ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕ್ರಮ ವಹಿಸಲಿ ಎಂದು ಹೇಳಿದರು.

ವರದಿಗಾರರ ಕೂಟದ ಅಧ್ಯಕ್ಷ ಜಿ.ಎಂ.ಆರ್. ಆರಾಧ್ಯ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಲೇಖಕ, ವಿಮರ್ಶಕ ಡಾ.ಲೋಕೇಶ್ ಅಗಸನಕಟ್ಟೆ, ನಿವೃತ್ತ ಮುಖ್ಯ ಶಿಕ್ಷಕ, ಹವ್ಯಾಸಿ ಖಗೋಳ ವೀಕ್ಷಕ ಎಂ.ಬಿ. ಶರಣಪ್ಪ, ಎಸ್. ಓಂಕಾರಯ್ಯ ತವನಿಧಿ, ಹಂಶಿ, ಉಪಸ್ಥಿತರಿದ್ದರು.

ನಿವೃತ್ತ ಪ್ರಾಧ್ಯಾಪಕರಾದ ಡಾ.ಎಸ್.ವಿ. ಕಮಲಮ್ಮ ಲೇಖಕರನ್ನು ಪರಿಚಯಿಸಿದರು. ಜನಜಾಗೃತಿ ವೇದಿಕೆ ಅಧ್ಯಕ್ಷ ನಾಗರಾಜ್ ಕಾಕನೂರು ಸ್ವಾಗತಿಸಿದರು. ಕೆ.ಎಸ್. ವೀರಭದ್ರಪ್ಪ ತೆಲಗಿ ನಿರೂಪಿಸಿದರು. ಕು.ಪಲ್ಲವಿ ಪ್ರಾರ್ಥಿಸಿದರು. ಎನ್.ಆರ್. ತಿಪ್ಪೇಸ್ವಾಮಿ ವಂದಿಸಿದರು.

## ತಹಶೀಲ್ದಾರ್ ಮೇಲಿನ ಹಲ್ಲೆಗೆ ಖಂಡನೆ: ಕ್ರಮಕ್ಕೆ ಮನವಿ



ದಾವಣಗೆರೆ, ಜ.29- ಬೀದರ್ ಜಿಲ್ಲೆಯ ಹುಮನಾಬಾದ್ ತಾಲ್ಲೂಕಿನ ತಹಶೀಲ್ದಾರ್ ಪ್ರದೀಪ್ ಹಿರೇಮಠ ಅವರ ಮೇಲೆ ನಡೆದ ಹಲ್ಲೆಯನ್ನು ಖಂಡಿಸಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ದಾವಣಗೆರೆ ಜಿಲ್ಲಾ ಶಾಖೆ ಹಾಗೂ ಗ್ರಾಮ ಲೆಕ್ಕಾಧಿಕಾರಿಗಳ ಸಂಘ ಮತ್ತು ಕಂದಾಯ ಇಲಾಖೆ ನೌಕರರ ಸಂಘದಿಂದ ಇಂದು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಲಾಯಿತು.

ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಪಾಲಾಕ್ಷಿ, ಗ್ರಾಮ ಲೆಕ್ಕಾಧಿಕಾರಿಗಳ ರಾಜ್ಯ ಸಂಘದ ಖಜಾಂಚಿ ಲೋಹಿತ್, ಕಂದಾಯ ಇಲಾಖೆ ನೌಕರರ ಸಂಘದ ಪದಾಧಿಕಾರಿಗಳು ಹಾಗೂ ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಾರ್ಯದರ್ಶಿಗಳಾದ ಗುರುಮೂರ್ತಿ, ಖಜಾಂಚಿ ಕಲ್ಲೇಶ್ವರ, ರಾಜ್ಯ ಪರಿಷತ್ ಸದಸ್ಯರಾದ ರಂಗನಾಥ್, ಗೌರವಾಧ್ಯಕ್ಷ ಉಮೇಶ್ ಮತ್ತು ಪದಾಧಿಕಾರಿಗಳು, ನಿರ್ದೇಶಕರು ಹಾಜರಿದ್ದರು.

## ದಾವಣಗೆರೆ ಕ್ರೀಡಾ, ಮನೋರಂಜನಾ ಕೇಂದ್ರದಿಂದ ಗಣರಾಜ್ಯೋತ್ಸವ

ದಾವಣಗೆರೆ, ಜ. 29- ಇಲ್ಲಿನ ವಿದ್ಯಾನಗರ, ವಿನಾಯಕ ಬಡಾವಣೆಯ ದಾವಣಗೆರೆ ಸ್ಪೋರ್ಟ್ಸ್ ಅಂಡ್ ರಿಕ್ರಿಯೇಷನ್ ಸೆಂಟರ್‌ನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

ಸತತ 4ನೇ ಬಾರಿಗೆ ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಆಯ್ಕೆಯಾದ ಜೆಜೆಎಂಎಂಸಿ ವೈದ್ಯಕೀಯ ಕಾಲೇಜಿನ ಕಣ್ಣಿನ ವಿಭಾಗದ ಮುಖ್ಯಸ್ಥ ಡಾ. ರವೀಂದ್ರ ಬಣಕಾರ್ ಅವರಿಗೆ ಕೇಂದ್ರದ ವತಿಯಿಂದ ಸನ್ಮಾನಿಸಲಾಯಿತು.

ಕೇಂದ್ರದ ಅಧ್ಯಕ್ಷ ಎನ್. ಪರಶುರಾಮನಗೌಡ, ಉಪಾಧ್ಯಕ್ಷ ಡಾ. ವಿ.ವಿ. ಸುಬ್ಬಾರೆಡ್ಡಿ, ಕಾರ್ಯದರ್ಶಿ ಎಂ.ಎಸ್. ವಾಮದೇವ, ಖಜಾಂಚಿ ಎಂ. ಪರಮೇಶ್ವರಪ್ಪ, ಸಹ ಕಾರ್ಯದರ್ಶಿ ಎಸ್.ಆರ್. ಹಾಲೇಶ್, ನಿರ್ದೇಶಕರುಗಳಾದ ಜಿ.ಜೆ. ಶಿವಕುಮಾರ್, ಎಂ. ಪ್ರಸನ್ನಕುಮಾರ್, ಹೆಚ್. ಎಂ. ಕೆಂಚನಗೌಡ್ರು, ಆರ್. ಅಶೋಕ, ಎಸ್.ಸಿ.ಎಂ. ಸ್ವಾಮಿ, ಬಿ.ಆರ್. ಸಿದ್ದೇಶ್, ಎಕ್ಸ್ ಅಫಿಷಿಯೋ ನಿರ್ದೇಶಕರಾದ ಡಾ. ಎಂ.ಜಿ. ರಾಜಶೇಖರಪ್ಪ, ಕೆ. ಹನುಮಂತಪ್ಪ ಉಪಸ್ಥಿತರಿದ್ದರು.

## ಗರ್ಭಿಣಿಯರ ನೇಮಕದ ನಿಯಮ ವಾಪಸ್

**(1ನೇ ಪುಟದಿಂದ)** ಪಡೆದುಕೊಳ್ಳುತ್ತಿದ್ದರು.

ಎಸ್.ಬಿ.ಐ. ನಿಲುವಿಗೆ ಕೆಲ ಸಂಸದರು, ಬ್ಯಾಂಕ್ ಸಂಘಟನೆಗಳು ಹಾಗೂ ದೆಹಲಿ ಮಹಿಳಾ ಆಯೋಗ ಸೇರಿದಂತೆ ಹಲವರು ಆಕ್ಷೇಪಿಸಿದ್ದರು.

ನಂತರದಲ್ಲಿ ಬ್ಯಾಂಕ್ ತನ್ನ ನೇಮಕಾತಿ ನಿಯಮಗಳನ್ನು ಬದಲಿಸಿದೆ. ಗರ್ಭಿಣಿಯರಿಗೆ ಸಂಬಂಧಿಸಿದಂತೆ ಈ ಹಿಂದೆ ಇದ್ದ ನಿಯಮಗಳೇ ಮುಂದುವರೆಯಲಿವೆ ಎಂದು ಎಸ್.ಬಿ.ಐ. ಹೇಳಿಕೆಯಲ್ಲಿ ತಿಳಿಸಲಾಗಿದೆ.

ಈ ಹಿಂದೆ ಆರು ತಿಂಗಳ ಗರ್ಭಿಣಿಯಾಗಿರುವವರೂ ಬ್ಯಾಂಕ್ ಸೇವೆಗೆ ಸೇರಲು ಕೆಲ ನಿರ್ಬಂಧಗಳೊಂದಿಗೆ ಅನುಮತಿ ನೀಡಲಾಗುತ್ತಿತ್ತು.

## ಯುವಕನ ಹತ್ಯೆ : ಇಬ್ಬರ ಬಂಧನ

ದಾವಣಗೆರೆ, ಜ.29- ಊಟ ಮಾಡಿ ಮಲಗಿದ್ದ ಯುವಕನನ್ನು ಕೊಲೆಗೈದಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಇಲ್ಲಿನ ಗಾಂಧಿ ನಗರ ಪೊಲೀಸರು ಬಂಧಿಸಿದ್ದಾರೆ.

ನಗರದ ವಿನೋದ ಅಲಿಯಾಸ್ ವಿನೋದ ರಾಜ್ ಮತ್ತು ರಾಕಿ ಅಲಿಯಾಸ್ ರಾಕೇಶ ಬಂಧಿತ ಆರೋಪಿಗಳು. ಇಲ್ಲಿನ ಶಿವಾಜಿ ನಗರದ ಕಳಸಪ್ಪನ ಗಲ್ಲಿಯ ಪುಟ್ಟಮ್ಮ ಪರಶುರಾಮಪ್ಪ ಅಲಿಯಾಸ್ ಪರಸಪ್ಪರ ಮಗ ಪುನೀತ (22)ನ ಕೊಲೆಗೆ ಸಂಬಂಧಿಸಿದಂತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಎಂದಿನಂತೆ ಇದೇ ದಿನಾಂಕ 25ರ ರಾತ್ರಿ 9ರ ವೇಳೆ ಪುನೀತನ ಮನೆಗೆ ಬಂದ ಆತನ ಸ್ನೇಹಿತರಾದ ವಿನೋದ ಮತ್ತು ರಾಕಿ ಎಂಬುವರು ಅವಾಚ್ಯವಾಗಿ ನಿಂದಿಸಿದ್ದಾರೆ. ಮನೆಯೊಳಗೆ ಹೋದ ಆರೋಪಿಗಳು ಮಲಗಿದ್ದ ಪುನೀತನ ಮೇಲೆ ತೀವ್ರ ಹಲ್ಲೆ ಮಾಡಿದ ಪರಿಣಾಮ ಆತನ ತಲೆಯ ಹಿಂಭಾಗದಲ್ಲಿ ರಕ್ತಗಾಯವಾಗಿದೆ. ಪುನೀತನಿಗೆ ಚಿಕಿತ್ಸೆ ಕೊಡಿಸಿದರೂ ಫಲಿಸದೇ ಶುಕ್ರವಾರ ಬೆಳಿಗ್ಗೆ ಮೃತಪಟ್ಟಿದ್ದಾನೆ ಎಂದು ಮೃತನ ತಾಯಿ ಪುಟ್ಟಮ್ಮ ಪೊಲೀಸರಿಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದರು.

ಆರೋಪಿಗಳ ಪತ್ತೆಗಾಗಿ ಎಸ್ಪಿ ಸಿ.ಬಿ.ರಿಷ್ಯಂತ್ ರಚಿಸಿದ್ದ ಡಿವೈಎಸ್ಪಿ ನರಸಿಂಹ ತಾಮ್ರಧ್ವಜ ನೇತೃತ್ವದಲ್ಲಿ ಕೆಟಿಜೆ ನಗರ ಠಾಣೆ ಪಿಎಸ್‌ಐ ಪ್ರಭು ವಿ.ಕೆಳಗಿನಮನಿ, ಸಿಬ್ಬಂದಿಗಳಾದ ಪ್ರಕಾಶ, ಗಿರೀಶ ಗೌಡ, ಎ.ಪಿ. ನರೇಶ, ಆಸ್ಕರ್ ಅಲಿ, ನಿಜಲಿಂಗಪ್ಪ ಒಳಗೊಂಡ ತಂಡವು ಆರೋಪಿಗಳನ್ನು ಬಂಧಿಸಿದೆ.

## ಸೇಂಟ್ ಜಾನ್ಸ್ ಶಾಲೆಯಲ್ಲಿ 73ನೇ ಗಣರಾಜ್ಯೋತ್ಸವ




ದಾವಣಗೆರೆ, ಜ.29- ನಗರದ ಶಿವಕುಮಾರಸ್ವಾಮಿ ಬಡಾವಣೆಯಲ್ಲಿರುವ ಸೇಂಟ್ ಜಾನ್ಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ 73 ನೇ ಗಣರಾಜ್ಯೋತ್ಸವ ಮತ್ತು ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳ ಅಭಿನಂದನಾ ಸಮಾರಂಭ ಜರುಗಿತು.

2019-20 ಮತ್ತು 2020-21 ನೇ ಸಾಲಿನ ಎಸ್ಸೆಸ್ಸೆಲ್ಸಿ ವಾರ್ಷಿಕ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿ ಉತ್ತೀರ್ಣರಾದ ವಿದಾರ್ಥಿಗಳಿಗೆ ಪ್ರತಿವರ್ಷವೂ ಸಂಸ್ಥೆಯಿಂದ ನೀಡಲಾಗುತ್ತಿರುವ ಹುಲ್ಲುಮನೆ ರಾಮಪ್ಪ ಭೀಮಪ್ಪ ಬಂಗಾರದ ಪದಕವನ್ನು ನೀಡಿ ಸನ್ಮಾನಿಸಲಾಯಿತು. ಡಯಟ್ ಕಾಲೇಜು ಉಪನಿರ್ದೇಶಕ ಹೆಚ್.ಕೆ. ಲಿಂಗರಾಜು, ವಿದ್ಯಾಸಂಸ್ಥೆಯ ಕಾರ್ಯದರ್ಶಿಯೂ ಆದ ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟದ ಅಧ್ಯಕ್ಷ ಟಿ.ಎಂ. ಉಮಾಪತಯ್ಯ, ಉಪಾಧ್ಯಕ್ಷ ಹೆಚ್. ಅನಿಲ್‌ಕುಮಾರ್ ಮತ್ತು ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ರಾತ್ರಿ ಕರ್ಫ್ಯೂ ರದ್ದು

**(1ನೇ ಪುಟದಿಂದ)** ಚಿಕಿತ್ಸೆಗೆ ಶೇ. 25 ರಷ್ಟು ಹಾಸಿಗೆಗಳನ್ನು ನಿಗದಿಪಡಿಸಲು ನಿರ್ಧರಿಸ ಲಾಯಿತು. ಕೋವಿಡ್ ಹೊರತು ಪಡಿಸಿ, ಇತರರೆ ಚಿಕಿತ್ಸೆಗಳನ್ನು ಸಮರ್ಪಕವಾಗಿ ಒದಗಿಸಲು ಕ್ರಮ ಕೈಗೊಳ್ಳಬೇಕೆಂದೂ ಸಭೆಯಲ್ಲಿ ನಿರ್ಧರಿಸಲಾಗಿದೆ.

## ಸಾಲ ಸೌಲಭ್ಯ ಯೋಜನೆಗಳಿಗೆ 1645 ಅರ್ಜಿ ಸಲ್ಲಿಕೆ

ದಾವಣಗೆರೆ, ಜ.29 - ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದಡಿ ಬರುವ ವಿಶ್ವಕರ್ಮ, ಉಪ್ಪಾರ, ಅಂಬಿಗ, ಆರ್ಯವೈಶ್ಯ, ಮಡಿವಾಳ, ಅಲೆಮಾರಿ ಸವಿತಾ ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ ಜಾರಿಗೊಳಿಸಿರುವ ವಿವಿಧ ಸಾಲ ಸೌಲಭ್ಯ ಯೋಜನೆಗಳಿಗಾಗಿ 2021-22 ನೇ ಸಾಲಿಗೆ ಒಟ್ಟು 1645 ಅರ್ಜಿಗಳು ಸಲ್ಲಿಕೆಯಾಗಿವೆ.

ಅಲೆಮಾರಿ ಅರೆ ಅಲೆಮಾರಿ ನಿಗಮದಡಿ ಚೈತನ್ಯ ಸ್ವಯಂ ಉದ್ಯೋಗ ಯೋಜನೆಗೆ ಒಟ್ಟು 460, ಅಂಬಿಗ ಅಭಿವೃದ್ಧಿ ನಿಗಮದಡಿ 10, ವಿಶ್ವಕರ್ಮ ಅಭಿವೃದ್ಧಿ ನಿಗಮದಡಿ 220, ಮಡಿವಾಳ ಅಭಿವೃದ್ಧಿ ನಿಗಮದಡಿ 107, ಸವಿತಾ ಸಮಾಜ ಅಭಿವೃದ್ಧಿ ನಿಗಮದಡಿ 31, ಉಪ್ಪಾರ ಅಭಿವೃದ್ಧಿ ನಿಗಮದಡಿ 359 ಸಾಂಪ್ರದಾಯಿಕ ಕುಶಲಕರ್ಮಿ ಸಾಲ ಯೋಜನೆಗೆ ಒಟ್ಟು 327 ಜನರು ಅರ್ಜಿ ಸಲ್ಲಿಸಿದ್ದಾರೆ.

ಈ ಪೈಕಿ 1128 ಅರ್ಜಿಗಳು ಅಂಗೀಕೃತಗೊಂಡಿದ್ದು, 517 ಅರ್ಜಿಗಳು ವಿವಿಧ ಕಾರಣಗಳಿಗಾಗಿ ತಿರಸ್ಕೃತಗೊಂಡಿವೆ ಎಂದು ನಿಗಮದ ಜಿಲ್ಲಾ ವ್ಯವಸ್ಥಾಪಕರು ತಿಳಿಸಿದ್ದಾರೆ.

## ಜಿಲ್ಲೆಯಲ್ಲಿ 216 ಪಾಸಿಟಿವ್

ದಾವಣಗೆರೆ, ಜ.29- ಜಿಲ್ಲೆಯಲ್ಲಿ ಶನಿವಾರ 216 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟ ಬಗ್ಗೆ ವರದಿಯಾಗಿದೆ. 325 ಜನರು ಗುಣಮುಖರಾಗಿದ್ದು, 1900 ಸಕ್ರಿಯ ಪ್ರಕರಣಗಳಿವೆ. ದಾವಣಗೆರೆ ತಾಲ್ಲೂಕಿನಲ್ಲಿ 78, ಹರಿಹರ 16, ಜಗಳೂರು 11, ಚನ್ನಗಿರಿ 28, ಹೊನ್ನಾಳಿ 79 ಹಾಗೂ ಹೊರ ಜಿಲ್ಲೆಯ ನಾಲ್ವರಲ್ಲಿ ಸೋಂಕು ಕಾಣಿಸಿಕೊಂಡಿದೆ.

## ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರ್ ವೃತ್ತದಲ್ಲಿ ಗಣರಾಜ್ಯೋತ್ಸವ



ದಾವಣಗೆರೆ, ಜ. 29- ನಗರದ ಪ್ರಿನ್ಸ್ ಜಯಚಾಮರಾಜೇಂದ್ರ ಒಡೆಯರ್ ಸರ್ಕಲ್‌ನಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

ಸ್ವಾತಂತ್ರ್ಯ ಹೋರಾಟದಲ್ಲಿ ಮಡಿದ ಅನೇಕರನ್ನು ಸ್ಮರಿಸಿ ಮಹಾತ್ಮ ಗಾಂಧೀಜಿಯವರ ಹಾಗೂ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಭಾವಚಿತ್ರವನ್ನಿಟ್ಟು ಪೂಜೆ ಮಾಡಿ ಸಿಹಿ ಹಂಚಲಾಯಿತು.

ಈ ಸಂದರ್ಭದಲ್ಲಿ ನಿರಂಜನ ಪ್ರೆಸ್‌ನ ಇಂದೂಧರ ನಿಶಾನಿಮಠ, ಎಸ್‌ಎಸ್ ಕಾರ್ ಡೆಕೋರ್‌ನ ಮಂಜುನಾಥ, ಹಿಮಸಾಗರ ಚಂದ್ರಹಾಸ್, ರಾಯಲ್ ಮೊಬೈಲ್‌ನ ಅಲಿ, ಅಶೋಕ, ನಟರಾಜ್ ಬೆಳ್ಳೂಡಿ, ಮುಸ್ತಾಕ್, ಸುನೀಲ್, ದಾದಾಪೀರ್, ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ವೀರಪ್ಪ ಎಂ.ಬಾವಿ ಉಪಸ್ಥಿತರಿದ್ದರು.

ಜನ್ಮ ದಿನದ ಶುಭಾಶಯಗಳು

ಕಲರ್ಸ್ ಕಲ್ಚರಲ್ ಅಕಾಡೆಮಿಯ ಸಂಸ್ಥಾಪಕರು,
ಅಧ್ಯಕ್ಷರೂ, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಸಮಿತಿ
ಖಜಾಂಚಿಗಳೂ, ಸಂಘಟನಾ ಚತುರರೂ,
ಕ್ರೀಡಾಭಿಮಾನಿಗಳೂ ಆದ
ಶ್ರೀ ನಲ್ಲೂರು ಎಸ್. ರಾಘುಣ್ಣ (ಗುರೂಜಿ)
ಅವರಿಗೆ ಹುಟ್ಟು ಹಬ್ಬದ ಶುಭಾಶಯಗಳು.



ಕಲರ್ಸ್ ಕಲ್ಚರಲ್ ಅಕಾಡೆಮಿ, ದಾವಣಗೆರೆ.

# ಆರೋಗ್ಯ ವೃದ್ಧಿಗೆ ಸೂರ್ಯ ನಮಸ್ಕಾರ ನೆರವು

## ಹೊನ್ನಾಳಿ : ಸೂರ್ಯ ನಮಸ್ಕಾರ ಅಭಿಯಾನದಲ್ಲಿ ಹಿರೇಕಲ್ಮಠದ ಶ್ರೀ ಒಡೆಯರ್ ಚನ್ನಮಲ್ಲಿಕಾರ್ಜುನ ಸ್ವಾಮೀಜಿ




ಹೊನ್ನಾಳಿ, ಜ. 29- ಸೂರ್ಯ ನಮಸ್ಕಾರ ಯೋಗಾಸನದ 10 ಭಂಗಿಗಳನ್ನು ಒಳಗೊಂಡಿದ್ದು, ಆರೋಗ್ಯ ವೃದ್ಧಿಗೆ ಹಾಗೂ ಮನೋಬಲ ಹೆಚ್ಚಿಸುವುದಕ್ಕೆ ನೆರವಾಗಲಿದೆ ಎಂದು ಒಡೆಯರ್ ಚನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು ತಿಳಿಸಿದರು.

ಇಲ್ಲಿನ ಪತಂಜಲಿ ಯೋಗ ಸಮಿತಿಯವರಿಂದ ಶ್ರೀ ಚನ್ನಪ್ಪಸ್ವಾಮಿ ಹಿರೇಕಲ್ಮಠ ಮೈದಾನದಲ್ಲಿ ಏರ್ಪಡಿಸಿದ್ದ 75 ಕೋಟಿ ಸೂರ್ಯ ನಮಸ್ಕಾರದ ಅಭಿಯಾನದಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ನೆರವಾಗುವ ಪುರಾತನ ಭಾರತೀಯ ವ್ಯಾಯಾಮಗಳಲ್ಲಿ ಅತ್ಯಂತ ಮಹತ್ವದ ಸ್ಥಾನ ಪಡೆದಿರುವುದು ಸೂರ್ಯ ನಮಸ್ಕಾರ. ಇದಕ್ಕೆ ವೇದ ಕಾಲದಿಂದಲೂ ತನ್ನದೇ ಆದ ಮಹತ್ವವಿದೆ.ಇದನ್ನು ವ್ಯಾಯಾಮ ಎಂದಷ್ಟೇ ಕರೆಯದೇ ಪ್ರಾರ್ಥನೆ ಮತ್ತು ನಮಸ್ಕಾರದ ಪಟ್ಟಿಯಲ್ಲಿ ಬರುತ್ತದೆ. ಹೀಗಾಗಿ ದೈನಂದಿನ ಚಟುವಟಿಕೆಯ ಒಂದು ಭಾಗವಾಗಿ ಇದನ್ನು ಸ್ವೀಕರಿಸಲಾಗಿದೆ ಎಂದು ಶ್ರೀಗಳು ತಿಳಿಸಿದರು.

ಯೋಗ ಶಿಕ್ಷಕ ಮಹೇಂದ್ರ ಬಳಿಗಾರ್ ಸ್ವಾಗತಿಸಿದರು. ಪತಂಜಲಿ ಪರಿವಾರದ ಶಿಕ್ಷಕರಾದ ಎಂ.ಬಿ. ರುದ್ರೇಶ್, ಸುರೇಶ್, ಚಂದ್ರಪ್ಪ, ಉಮೇಶ್, ಸುಜಾತ, ಪುಷ್ಪ, ನಂದಿನಿ, ನಿರ್ಮಲ, ನೇತ್ರ, ರೇಣುಕಾ, ಅಂಬಿಕಾ, ಯಶೋಧ, ಶೀಲಾ, ಪೂರ್ವಿ ಉಪಸ್ಥಿತರಿದ್ದರು.

## ರಂಭಾಪುರಿ ಶ್ರೀಗಳ ಪೀಠಾರೋಹಣ



ಬಾಳೆಹೊನ್ನೂರು, ಜ.29 - ಶ್ರೀ ರಂಭಾಪುರಿ ಪೀಠದ ಜಗದ್ಗುರು ಪ್ರಸನ್ನ ರೇಣುಕ ಡಾ. ವೀರಸೋಮೇಶ್ವರ ಸ್ವಾಮೀಜಿಗಳವರ 31ನೇ ವರ್ಷದ ಪೀಠಾರೋಹಣ ಮಹೋತ್ಸವ ಇದೇ ಫೆಬ್ರವರಿ 3ರಂದು ಬೆಳಿಗ್ಗೆ 11 ಕ್ಕೆ ಜರುಗಲಿದೆ. ಇಲ್ಲಿನ ಮಹಾಸಂಸ್ಥಾನ ಪೀಠದಲ್ಲಿ ಸರಳ ಹಾಗೂ ಸಾಂಪ್ರದಾಯಿಕವಾಗಿ ಜರುಗುವ ಈ ವರ್ಧಂತಿ ಮಹೋತ್ಸವದಲ್ಲಿ ಶ್ರೀ ಜಗದ್ಗುರುಗಳು ಪೀಠಾರೋಹಣ ಮಾಡಲಿದ್ದಾರೆ.

## ನಿಟುವಳ್ಳಿ ಭಾಗದಲ್ಲಿ ನಾಳೆ ವಿದ್ಯುತ್ ಇಲ್ಲ

ದಾವಣಗೆರೆ, ಜ.29- ನಿಟುವಳ್ಳಿ ಹಾಗೂ ನಿಟುವಳ್ಳಿ ಹೊಸಬಡಾವಣೆ, ದುರ್ಗಾಂಬಿಕ ದೇವಸ್ಥಾನ, 60 ಅಡಿ ರಸ್ತೆ ಹಾಗೂ ಸುತ್ತಮುತ್ತಲಿನಲ್ಲಿ ದಿನಾಂಕ 31ರ ಸೋಮವಾರ ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಇರುವುದಿಲ್ಲ.


## ಎಂಟನೇ ವರ್ಷದ ಚಿರಸ್ಮರಣೆ



ದಿ. ಶ್ರೀ ಬಳ್ಳೇಕಟ್ಟೆ ಚಂದ್ರಪ್ಪ
ವಿಜಯ ಬ್ಯಾಂಕ್ ನಿವೃತ್ತ ನೌಕರರು

ನೀವು ನಮ್ಮನ್ನಗಲಿ
ಇಂದಿಗೆ ಎಂಟು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ,
ನೀವು ಹಾಕಿಕೊಟ್ಟ
ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತಿದ್ದೇವೆ....

ಪತ್ನಿ : ಶ್ರೀಮತಿ ನಾಗರತ್ನಮ್ಮ ಚಂದ್ರಪ್ಪ
ಶ್ರೀಮತಿ ಶ್ರೀ ಹೇಮಾವತಿ ಎ.ಜೆ. ಸಂತೋಷ್ ಕುಮಾರ್ ಬಿ.ಸಿ.
ಶ್ರೀಮತಿ ಶ್ರೀ ಸವಿತಾ ಬಿ.ಸಿ. ಡಾ|| ಶಿವಯೋಗಿ ಎಲಿ
ಚಿ|| ಕಲ್ಪದ್ರುವ, ಚಿ|| ಯುವರಾಜ್ ಎಲಿ
ಲೋಕಿಕೆರೆ, ತ್ಯಾವಣಿಗೆ ವಂಶಸ್ಥರು, ಬಳ್ಳೇಕಟ್ಟೆ ನಾರಜ್ಜಿ ವಂಶಸ್ಥರು
ಸಂದೀಪ್ ಸಿ.ಯು., ಕಲ್ಪದ್ರುವ ಎಂಟರ್‌ಪ್ರೈಸಸ್
ವಿಜಯ ಬ್ಯಾಂಕ್ - ವಿಜಯ ಬಳಗದ ಸ್ನೇಹಿತರು, ಬಂಧು - ಮಿತ್ರರು


# ಮಠ, ಮಂದಿರ, ಮಸೀದಿಗಳಲ್ಲಿ ಸಂವಿಧಾನದ ಪಠಣವಾದಾಗ ಮಾತ್ರ ಜನರಲ್ಲಿ ಜಾಗೃತಿ ಸಾಧ್ಯ



**(1ನೇ ಪುಟದಿಂದ)** ಸದಸ್ಯ ಸೈಯದ್ ಎಜಾಜ್, ಪ್ರೊ. ಬಿ.ಕೃಷ್ಣಪ್ಪ ಭವನದ ಟ್ರಸ್ಟಿ ಹನಗವಾಡಿ ರುದ್ರಪ್ಪ, ಮಾನವ ಬಂಧುತ್ವ ವೇದಿಕೆಯ ರಾಜ್ಯ ಸಂಚಾಲಕ ರವೀಂದ್ರ ನಾಯ್ಕರ್, ವಿಭಾಗೀಯ ಸಂಚಾಲಕರಾದ ಸತೀಶ್ ಕುಮಾರ್, ಇರ್ಫಾನ್ ಮುದಗಲ್, ತೋಳಿ ಭರಮಣ್ಣ, ಜಿಲ್ಲಾ ಸಂಚಾಲಕ ಮಾಡಾಳ್ ಶಿವಕುಮಾರ್, ಜಿ.ಪಂ. ಮಾಜಿ ಸದಸ್ಯ ಎಂ.ನಾಗೇಂದ್ರಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಬಿ.ಅಬೀದ್ ಅಲಿ, ಕೆ.ಪಿ. ಗಂಗಾಧರ್, ಎ.ಆರೀಫ್ ಅಲಿ, ಪಿ.ಹೆಚ್.ಶಿವಕುಮಾರ್, ಕುಂಬಳೂರು ವಾಸು, ಜಿಗಳಿ ಪ್ರಕಾಶ್, ಹರಿಹರದ ಪಾರ್ವತಿ, ಡಿ.ವೈ.ಇಂದಿರಾ, ಉಕ್ಕಡಗಾತ್ರಿಯ ಮಂಜು ದೊಡ್ಮನಿ, ಮಲೇಬೆನ್ನೂರಿನ ಸಾಬೀರ್ ಜಯಸಿಂಹ, ಡಿಎಸ್‌ಎಸ್ -4ರ ಜಿಲ್ಲಾಧ್ಯಕ್ಷ ಸಂತೋಷ್ ನೋಟದವರ್ ಮತ್ತು ಇತರರು ಭಾಗವಹಿಸಿದ್ದರು.

ನಂತರ ನಡೆದ ಭಾರತದ ಸಾಮಾಜಿಕ, ಸಾಂಸ್ಕೃತಿಕ ತಲ್ಲಣಗಳು ಕುರಿತಾದ ಗೋಷ್ಠಿಯಲ್ಲಿ ವಿಷಯ ಮಂಡನೆ ಮಾಡಿದ ಡಾ. ಸಿದ್ದನಗೌಡ ಪಾಟೀಲ್ ಅವರು, ಶ್ರೇಷ್ಠತೆಯ ಹೆಸರಿನಲ್ಲಿ ಮನುಷ್ಯ ಜಾತಿ, ಧರ್ಮಗಳ ದೊಡ್ಡ ಕಂದಕ ತಂದಿಟ್ಟು, ಅದನ್ನು ರಾಜಕೀಯ ಲಾಭಕ್ಕಾಗಿ ಬಳಸಿಕೊಳ್ಳುತ್ತಿರುವವರ ಜನಜಾಗೃತಿ ಯಾಗಬೇಕೆಂದರು.

## ಇಂದು ಸರ್ವೋದಯ ದಿನ: ನಗರದಲ್ಲಿ ಮಾಂಸ ಮಾರಾಟ ನಿಷೇಧ

ಇಂದು ಸರ್ವೋದಯ ದಿನಾಚರಣೆ ಹಿನ್ನೆಲೆಯಲ್ಲಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಾಣಿ ವಧೆ, ಪ್ರಾಣಿ ಮಾಂಸ ಹಾಗೂ ಮೀನಿನ ಮಾಂಸ ಮಾರಾಟವನ್ನು ನಿಷೇಧಿಸಲಾಗಿದೆ. ಮಾಂಸ ಮಾರಾಟ ಮಾಡಬಾರದು. ತಪ್ಪಿದಲ್ಲಿ ಪಾಲಿಕೆ ಕಾಯ್ದೆ ಅನ್ವಯ ಮಾಂಸ ಉದ್ದಿಮೆದಾರರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಪಾಲಿಕೆ ಪ್ರಕಟಣೆಯಲ್ಲಿ ಎಚ್ಚರಿಸಲಾಗಿದೆ.

## ನಗರದಲ್ಲಿಂದು ಶರಣ ಸಾಹಿತ್ಯ ಪರಿಷತ್ ಸಭೆ

ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಯು ಇಂದು ಬೆಳಿಗ್ಗೆ 11ಕ್ಕೆ ಎಂಸಿಸಿ 'ಬಿ' ಬ್ಲಾಕ್ ವೆಂಕಟೇಶ್ವರ ದೇವಸ್ಥಾನ ಪಕ್ಕದ ಭಾರತ ಸೇವಾದಳ ಭವನದಲ್ಲಿ ನಡೆಯಲಿದೆ.

## ಬಂಜಾರ ನೌಕರರ ಕಲ್ಯಾಣ ಅಭಿವೃದ್ಧಿ ಸಂಸ್ಥೆಯ ಸಭೆ

ದಾವಣಗೆರೆ, ಜ.29-ಜಿಲ್ಲಾ ಬಣಜಾರ (ಲಂಬಾಣಿ) ನೌಕರರ ಕಲ್ಯಾಣ ಅಭಿವೃದ್ಧಿ ಸಂಸ್ಥೆಯ ಸಾಮಾನ್ಯ ಸಭೆ ಫೆಬ್ರವರಿ 20 ರಂದು ಬೆಳಿಗ್ಗೆ 11 ಗಂಟೆಗೆ ಕುಂದುವಾಡ ರಸ್ತೆಯ ಚೌಡೇಶ್ವರಿ ದೇವಸ್ಥಾನದ ಹತ್ತಿರದ ಬಂಜಾರ ಭವನದಲ್ಲಿ ನಡೆಯಲಿದೆ ಎಂದು ಸಂಘದ ಕಾರ್ಯದರ್ಶಿ ಸಿ. ಸಣ್ಣ ರೆಡ್ಡಿನಾಯ್ಕ ತಿಳಿಸಿದ್ದಾರೆ.


## ಪ್ರೀತಿಯ ಅಭಿನಂದನೆಗಳು...





ದಾವಣಗೆರೆ ವಿಶ್ವವಿದ್ಯಾನಿಲಯ ನಡೆಸಿದ ಪದವಿ,
ಸ್ನಾತಕೋತ್ತರ ಪರೀಕ್ಷೆಯಲ್ಲಿ
ಎಂ.ಎ. ರಾಜ್ಯಶಾಸ್ತ್ರ ವಿಭಾಗದಲ್ಲಿ ಪ್ರಥಮ ರ್‍ಯಾಂಕ್
ಪಡೆಯುವ ಮೂಲಕ ದಾವಣಗೆರೆ ಜಿಲ್ಲೆಗೆ, ಹರಿಹರ
ತಾಲ್ಲೂಕಿಗೆ ಮತ್ತು ವಿಶೇಷವಾಗಿ ನಮ್ಮೂರಿಗೆ ಕೀರ್ತಿ
ತಂದಿರುವ ಕುಂಬಳೂರು ಗ್ರಾ.ಪಂ. ಸದಸ್ಯರಾದ
ಶ್ರೀಮತಿ ಉಮಾದೇವಿ
ಶ್ರೀ ಎಂ. ಹೆಚ್. ಶಿವರಾಮಚಂದ್ರಪ್ಪ
ದಂಪತಿ ಪುತ್ರಿ ಆದ
ಕುಮಾರಿ ಎಂ.ಎಸ್. ಪೂಜಾ
ಇವರಿಗೆ ನಮ್ಮ ಪ್ರೀತಿಯ ಅಭಿನಂದನೆಗಳು...
ಪೂಜಾ ಪ್ರಥಮ ರ್‍ಯಾಂಕ್ ಪಡೆಯಲು ಕಾರಣೀಭೂತರಾದ
ಎಲ್ಲಾ ಅಧ್ಯಾಪಕರಿಗೆ ಹೃದಯಪೂರ್ವಕ ಧನ್ಯವಾದಗಳು....
ಮಾಗಾನಹಳ್ಳಿ ಹಾಲಪ್ಪ ಮತ್ತು ಮಕ್ಕಳು
ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು,
ಮರಿಮೊಮ್ಮಕ್ಕಳು ಹಾಗೂ ಬಂಧು-ಮಿತ್ರರು
ಮತ್ತು ಕುಂಬಳೂರು ಗ್ರಾಮಸ್ಥರು



KIDZEE
Pre School
CONGRATULATES




our playgroup student
PANVIKA G.M.
and her proud parents
Father Girish G.H., Mother Mamatha H.P.
for getting into India book of records....
KIDZEE PRE SCHOOL
Vidyanagar 2 nd bus stop, Davangere
08192 260139, 98862 38437, 98446 00690



ಸ್ವಾತಂತ್ರ್ಯದ ಅಮೃತ ಮಹೋತ್ಸವ

ನವ ಭಾರತಕ್ಕಾಗಿ ನವ ಕರ್ನಾಟಕ



ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು



ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಭವ್ಯ ಭವಿಷ್ಯಕ್ಕಾಗಿ ಭರವಸೆಯ ಹೆಜ್ಜೆಗಳು
ಜನಕಲ್ಯಾಣವೇ ನಮ್ಮ ಧ್ಯೇಯ

6 ತಿಂಗಳುಗಳು
ತಿಂಗಳು ಆರು. ನಿರ್ಣಯಗಳು ನೂರು.

ಸನ್ಮಾನ್ಯ ಪ್ರಧಾನ ಮಂತ್ರಿ ಶ್ರೀ ನರೇಂದ್ರ ಮೋದಿಯವರ ಮಾರ್ಗದರ್ಶನದಲ್ಲಿ ಇಂದಿಗೆ ಆರು ತಿಂಗಳುಗಳ ಅವಧಿಯನ್ನು ಪೂರೈಸಿರುವ ಶ್ರೀ ಬಸವರಾಜ ಬೊಮ್ಮಾಯಿ ನೇತೃತ್ವದ ಕರ್ನಾಟಕ ಸರ್ಕಾರ, ಕೋವಿಡ್–19 ಹಾಗೂ ಅತಿವೃಷ್ಟಿಯಂತಹ ಬೃಹತ್ ಸವಾಲುಗಳ ನಡುವೆಯೂ ಪ್ರಗತಿಯ ದಿಕ್ಕಿನಲ್ಲಿ ದೃಢ ಹೆಜ್ಜೆಗಳನ್ನು ಹಾಕಿದೆ.

ರೈತರ ಹಿತರಕ್ಷಣೆ, ಸಂತ್ರಸ್ತ ರೈತರ ನೆರವಿಗೆ ಮಹತ್ತರ ನಿಲುವು
- ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ರೈತರಿಗೆ ಹೆಚ್ಚುವರಿಯಾಗಿ ರೂ.4,000 ನೆರವು
- ಅಕಾಲಿಕ ಮಳೆಯಿಂದಾದ ಬೆಳೆಹಾನಿಗೆ 16.99 ಲಕ್ಷ ರೈತರಿಗೆ ಈವರೆಗೆ ರೂ.1,181.3 ಕೋಟಿ ಪರಿಹಾರ
- ಮಳೆಯಾಶ್ರಿತ ಬೆಳೆ, ನೀರಾವರಿ ಬೆಳೆ, ತೋಟಗಾರಿಕೆ ಬೆಳೆ ರೈತರಿಗೆ ನೀಡುವ ಬೆಳೆ ಪರಿಹಾರದಲ್ಲಿ ಏರಿಕೆ

ಗ್ರಾಮೀಣ ಭಾಗದ ಪ್ರೌಢಶಾಲೆಯ ಹೆಣ್ಣುಮಕ್ಕಳಿಗೆ ವಿದ್ಯಾನಿಧಿ ಯೋಜನೆ ವಿಸ್ತರಣೆ





ಆಹಾರ ಭದ್ರತೆ
ಪ್ರಸ್ತುತ, ಪ್ರತಿ ಫಲಾನುಭವಿಗೆ 5 ಕೆ.ಜಿ. ಅಕ್ಕಿ ನೀಡುತ್ತಿದ್ದು, ಜೊತೆಗೆ 1 ಕೆ.ಜಿ. ರಾಗಿ/ಜೋಳ ವಿತರಿಸಲು ಕ್ರಮ

ಕೋವಿಡ್ ಯಶಸ್ವಿ ನಿರ್ವಹಣೆ
ಕೋವಿಡ್–19 ಲಸಿಕೆ:
1ನೇ ಡೋಸ್: 100% ಗುರಿ ಸಾಧನೆ.
2ನೇ ಡೋಸ್: 86% ಗುರಿ ಸಾಧನೆ.



ಮಹಿಳೆಯರ ಸಬಲೀಕರಣ
- ಬೆಂಗಳೂರಿನಾಚೆ 25 ಮಹಿಳಾ ನವೋದ್ಯಮಗಳನ್ನು ಪ್ರಾರಂಭಿಸಲು ರೂ.6.5 ಕೋಟಿ ಅನುದಾನ
- 7,500 ಸ್ತ್ರಿ ಶಕ್ತಿ ಸಂಘಗಳಿಗೆ ತಲಾ ಒಂದು ಲಕ್ಷ ರೂ.ನಂತೆ ರೂ.75 ಕೋಟಿ ಧನಸಹಾಯ



ಆರೋಗ್ಯ ಸೇವೆಗಳಲ್ಲಿ ಸುಧಾರಣೆ
- 'ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ' ಯೋಜನೆಯಡಿ 8.24 ಲಕ್ಷ ಕಾರ್ಡ್‌ಗಳ ವಿತರಣೆ
- ಮಕ್ಕಳಲ್ಲಿ ನ್ಯುಮೋನಿಯಾ ತಡೆಗಟ್ಟುವ ಪಿಸಿವಿ ಲಸಿಕೆ ಪರಿಚಯ

ಶಿಕ್ಷಣ
- ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಮೊದಲು ಅನುಷ್ಠಾನಗೊಳಿಸಿದ ರಾಜ್ಯ ಕರ್ನಾಟಕ
- 1,240 ಉಪನ್ಯಾಸಕರು, 15,000 ಹಿ.ಪ್ರಾ. ಶಾಲಾ ಶಿಕ್ಷಕರ ನೇಮಕಾತಿಗೆ ಅನುಮೋದನೆ
- ಅತಿಥಿ ಉಪನ್ಯಾಸಕರ ವೇತನದಲ್ಲಿ ಹೆಚ್ಚಳ
- ಸ್ಮಾರ್ಟ್ ಕ್ಲಾಸ್‌ರೂಂಗಳಿಗಾಗಿ ರೂ.97 ಕೋಟಿ



ನಗರೋತ್ಥಾನ – ನಗರಾಭಿವೃದ್ಧಿ
ಬೆಂಗಳೂರು ಅಭಿವೃದ್ಧಿಗೆ ರೂ. 6,000 ಕೋಟಿ. ಸ್ಥಳೀಯ ಸಂಸ್ಥೆಗಳಿಗೆ ರೂ. 3,885 ಕೋಟಿ.

ವಿದೇಶಿ ನೇರ ಹೂಡಿಕೆಯಲ್ಲಿ ದೇಶದಲ್ಲಿ ಕರ್ನಾಟಕ ನಂ. 1 – ಶೇ. 45ರಷ್ಟು ರಾಜ್ಯಕ್ಕೆ

ಸವಾಲುಗಳ ನಡುವೆಯೂ ಅಭಿವೃದ್ಧಿಯಲ್ಲಿ ದಾಪುಗಾಲು
- ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ ರೂ.2,398.45 ಕೋಟಿ ಮೊತ್ತದ ಯೋಜನೆಗಳಿಗೆ ಆಡಳಿತಾತ್ಮಕ ಅನುಮೋದನೆ
- ರಾಜ್ಯದ ಒಟ್ಟಾರೆ ಅಭಿವೃದ್ಧಿಗಾಗಿ ಅಮೃತ ಯೋಜನೆಗಳು

ಪ್ರಾದೇಶಿಕ ಸಮತೋಲನಕ್ಕೆ ಒತ್ತು:
ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ರೂ.3,000 ಕೋಟಿ ಮಂಜೂರಾತಿ

ಕಾರ್ಮಿಕರ ಕಲ್ಯಾಣಕ್ಕೆ ಕ್ರಮಗಳು
- ಕಟ್ಟಡ ಕಾರ್ಮಿಕರ ಮಕ್ಕಳಿಗೆ ರೂ.150 ಕೋಟಿ ವಿದ್ಯಾರ್ಥಿವೇತನ ವರ್ಗಾವಣೆ
- ಲಾಕ್‌ಡೌನ್: ಅಸಂಘಟಿತ ಕಾರ್ಮಿಕರಿಗೆ ರೂ.2,000 ನೆರವು





ವಸತಿ
ಪ್ರಸಕ್ತ ಸಾಲಿನಲ್ಲಿ 5 ಲಕ್ಷ ಮನೆಗಳ ಮಂಜೂರಾತಿಗೆ ಅನುಮೋದನೆ

ನಾಗರಿಕ–ಸ್ನೇಹಿ ಸೇವೆಗಳ ಪರಿಚಯ
ಗ್ರಾಮ ಒನ್ । ಜನಸ್ಪಂದನ । ಜನಸೇವಕ ಯೋಜನೆ

ಪರಿಶಿಷ್ಟ ವರ್ಗಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಪ್ರತ್ಯೇಕ ಸಚಿವಾಲಯ

ಹಿರಿಯರ, ವಿಶೇಷಚೇತನರ, ವಿಧವೆಯರ ಮಾಸಿಕ ಪೋಷಣಾ ಭತ್ಯೆ/ಪಿಂಚಣಿಯಲ್ಲಿ ಹೆಚ್ಚಳ

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ವಾರ್ತೆ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ


**JANATHAVANI** - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte